# कर्णाटकसंस्कृतविश्वविद्यालयः
# वार्तापत्रम्
## ಕರ್ನಾಟಕಸಂಸ್ಕೃತವಿಶ್ವವಿದ್ಯಾಲಯಃ – ವಾರ್ತಾಪತ್ರಮ್

ಕನ್ನಡ–ಸಂಸ್ಕೃತ ತ್ರೈಮಾಸಿಕ ಪತ್ರಿಕೆ ಸಂಪುಟ: 01 ಸಂಚಿಕೆ: 04 ಅಕ್ಟೋಬರ್, 2011 ಬೆಲೆ: ರೂ. 10/–



ಕುಲಪತಿಗಳು

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

ಸಂಪಾದಕರು:

**ಡಾ. ನಾಗರತ್ನಾ ಹೆಗಡೆ**

ಸಂಪಾದಕ ಸಲಹಾ ಮಂಡಳಿ:

ಪ್ರೊ. ಎ.ವಿ. ನಾವಡ

ಪ್ರೊ. ಸಿ. ನಂಜುಂಡಯ್ಯ

ಪ್ರೊ. ಟಿ.ಎನ್. ಪ್ರಭಾಕರ

ಡಾ. ಕೆ.ಎಂ. ಮಹದೇವಯ್ಯ

ಡಾ. ಎಚ್. ವೆಂಕಟೇಶಪ್ಪ



ಪ್ರಕಾಶಕರು:

**ಕುಲಸಚಿವರು**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ
ಮಹಾವಿದ್ಯಾಲಯ ಆವರಣ
ಪಂಪ ಮಹಾಕವಿ ರಸ್ತೆ,
ಚಾಮರಾಜಪೇಟೆ
ಬೆಂಗಳೂರು – 560 018.

**ಖಾಸಗಿ ಪ್ರಸಾರಕ್ಕಾಗಿ**

ಚಂದಾ ವಿವರ:

| | |
|---|---|
| ಬಿಡಿ ಪ್ರತಿ | ` 10.00 |
| ವಾರ್ಷಿಕ | ` 40.00 |
| ತ್ರೈವಾರ್ಷಿಕ | `120.00 |

(ಚಂದಾದಾರರು ಪೋಸ್ಟಲ್ ಆರ್ಡರ್ ಅಥವಾ ಡಿ.ಡಿ.ಯನ್ನು **'ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಬೆಂಗಳೂರು'** ಈ ಹೆಸರಿಗೆ ಕಳುಹಿಸಿಕೊಡುವುದು.)



संस्कृतशिक्षणनिर्देशनालयेन
आयोजिते
स्नातकपूर्वदीक्षान्तसमारोहे
प्रवृत्तस्य
सांस्कृतिककार्यक्रमस्य
किञ्चन दृश्यम् ।

होन्नावरस्य श्री
राघवेन्द्रभारती
सवेदसंस्कृतमहाविद्यालये
संस्कृतसप्ताहविशेषोत्सवम्
समुद्घाटयन्
कर्णाटकसंस्कृतविश्वविद्यालयस्य
कुलपतिः ।





बाळेहोन्नूरुनगरे श्री
रम्भापुरिजगद्गुरूणां
सान्निद्ध्ये
संस्कृतशिक्षकाणां
पुनश्चेतनशिबिरं
समुद्घाटयन् कुलसचिवः
डा. चन्द्रमौलि एस्.
नायकरः ।

## कुलपतीनां वचः

**प्रो. मल्लेपुरं जि. वेङ्कटेशः**

**अयि भोः महाजनाः,**



कर्णाटकसंस्कृतविश्वविद्यालयेन प्रथमः स्नातकपूर्वदीक्षान्तसमारोहः २०.९.११ तमे दिनाङ्के सायं शिक्षकसदने अत्यन्तं यशस्वितया प्रचालितः। सहस्रं छात्राः अस्य समारम्भस्य साक्षिणः जाताः । कर्णाटकस्य विभिन्नभागेभ्यः आगताः शताधिकाः संस्कृताध्यापकाः भागम् अवहन् । बहवः संस्कृताभिमानिनः प्रवाहरूपेण समागताः। वस्तुतः अयं संस्कृतस्य पर्वकालः । अनेन समारम्भेण कर्णाटकसंस्कृतेतिहासे एव कश्चन नूतनः उपक्रमः प्रख्यापितः अभवत् । संस्कृतविषये श्रद्धा–गौरव–विश्वासप्रवर्धने कारणीभूतः जातः अयं कार्यक्रमः ।

अस्मिन् एव शुभावसरे २०१२–१३ शैक्षणिकवर्षे ४५ अनुदानरहितपाठशालाः अपि अनुदानं प्राप्नुयुः इति सदुद्देशेन प्रस्तावना सर्वकाराय प्रेषिता वर्तते। अस्मिन् वर्षे प्रथमकक्ष्यातः स्नातकोत्तरकक्ष्यापर्यन्तं ४५,००० छात्राः संस्कृतम् अधीयानाः सन्ति । सर्वमहाविद्यालयेषु प्रौढशिक्षणम् उत्तमरीत्या प्रचलति। संस्कृतविषये सार्वजनिकैः, अभिमानिभिः, सर्वकारेण च उत्तमः अभिप्रायः, प्रतिक्रिया च प्रकाश्यमानः वर्तते इति यत् तत् संस्कृतसूर्यस्य प्रकाशे कारणीभूतम् अस्ति। संस्कृतभाषा न केवलम् अन्नदात्री लौकिकी च, अपि तु अन्तरङ्गविकासस्य अपि कारणीभूता । सर्वेषु संस्कृतभाषाविषयकः अभिमानः वर्धताम् । स च अभिमानः कर्णाटकसंस्कृतविश्वविद्यालयस्य अभिवृद्धौ कारणीभूतः भवतु इति आशासे ।

## सम्पादकीयम्

**डा ॥ नागरत्ना हेगडे**

**आत्मीयबन्धो,**



कर्णाटकसंस्कृतविश्वविद्यालयेन प्रकाश्यमानं वार्तापत्रं प्रति सर्वदिग्भ्यः संस्कृतकार्यक्रमाणां वार्ताः प्रवाहरूपेण आगच्छन्त्यः सन्ति इत्येतदेव प्रमाणयति यत् अस्य संस्कृतविश्वविद्यालयस्य आरम्भकारणतः सर्वेषु अध्यापकेषु, छात्रेषु, अभिमानिषु च नवचैतन्यम् अजायत इति। प्रथमः स्नातकपूर्वदीक्षान्तसमारोहस्तु वैभवेन सुसम्पन्नः इति तु सर्वेषामस्माकम् अभिमानस्य विषयः । वार्तापत्रं सुन्दरम् आकर्षकञ्च वर्तते इति बहूनां संस्कृतज्ञानाम् अभिमानिनां च अभिप्रायाः पत्रद्वारा आगच्छन्तः सन्ति । इदं संस्कृतस्य सौभाग्यमिति वदामश्चेत् न तत्र अतिशयोक्तिः । इदं वार्तापत्रं वर्षं यावत् यशस्वितया कार्यं समपूरयत् इति मोमुद्यते मे मनः ।

अस्मिन् शरन्नवरात्रसन्दर्भे सर्वेभ्यः संस्कृताभिमानिभ्यः शुभाशयाः ।



# सन्देशः

**डा. टि. एस्. कृष्णमूर्तिः**

निवृत्तः संस्कृतप्राध्यापकः भूतपूर्वः सदस्यश्च,
अध्ययनमण्डली सेनेट् च, बेङ्गलूरु विश्वविद्यालयः

अयमस्ति अस्माकं महतो हर्षप्रकर्षस्य विषयः यत् बहुकालात् निरीक्षितस्य कर्णाटकसंस्कृतविश्वविद्यालयस्य आरम्भः ऐषमस्तने संवत्सरे समभवदिति । ततः वर्षाभ्यन्तर एव संस्कृतनिर्देशनालयोऽपि विश्वविद्यालयस्य आश्रये उद्घाटित इत्यस्माकमधिकतरः सन्तोषस्थानम् । द्वावपि इमौ कर्णाटकराज्यस्य सौभाग्यम् । अस्मिन् विषये कर्णाटकसर्वकारः धन्यवादार्हः ।

वार्तापत्रं मया सकुतूहलम् अवलोकितम् । तस्योपयोगितां समीक्ष्य नितरां हृतहृदयोऽस्मि । तस्मिन् प्रकाशितानां लेखानां गुणगरिमा स्वान्तं मे प्रतिपलं प्रसादयति । सुविख्यातानां संस्कृते निष्णातानां मनीषिणां पण्डितप्रवराणाञ्च परिचयोऽप्यस्मिन् भवतीति अस्माकं सन्तोषस्थानम् । ईदृशेन वार्तापत्रेण संस्कृतभाषायाः बलसंवर्धनम् अस्मिन् काले भवतीत्यस्माकमाशयः ।

सन्ति चाद्यापि एतादृशवार्तापत्रं पिपठिषवो विद्वांसः छात्राश्चेति भवदीयः श्रमः सार्थको जातः । रक्षापुटावपि रमणीयौ आकर्षकौ च स्तः ।

**स्वतन्त्रे भारते वर्षे वर्धतां नव्यशोभया ।**
**संस्कृता भारती रम्या रञ्जयन्ती मनांसि नः ॥**



# सन्देशः

“भरतखण्डस्य किमैश्वर्यमिति पृष्टं चेत् संस्कृतमित्येव वदेयमित्यत्र न संशयलेशोऽपि नाम”। अस्माकं प्रधानमन्त्रिणः श्रीमतः जवाहरलाल्महोदयस्य वचनमिदम् । एतादृशम् ऐश्वर्यं मूलतः अस्मदीयमिति स्मरणमेव अस्मासु रोमाञ्चं जनयति । एतादृशसम्पत्तेः संरक्षणार्थं संवर्धनार्थं च संस्कृतप्रियैः चिरादपेक्षितः कर्णाटकसंस्कृतविश्वविद्यालयः स्थापितः, तथा तद्द्वारा इदानीं त्रैमासिकं वार्तापत्रमपि प्रकाश्यमानमस्तीति महान् प्रमोदविषयः ।

संस्कृतज्ञाः सर्वे जानन्ति यत् अस्मिन् क्षेत्रे वेदोपनिषत्कालादारभ्य अद्यावधि अनेकाः स्त्रियः कीदृशसेवाः कृतवत्यः इति । अद्यापि तादृश्यः सुज्ञाताः अज्ञाताश्च नार्यः गीर्वाणवाण्याः सेवां कुर्वत्यः सन्ति । इदानीं ताः अस्मिन् महत्कार्ये इतोऽप्यधिकं तल्लीनाः भूत्वा सेवापराः भवन्तु इति संस्कृताभिमानिनां सर्वेषाम् अस्माकमाशयः ।

**– विदुषी एन्. आर्. गिरिजाम्बा**

चामराजपेटे, बेङ्गलूरु

# सुसम्पन्ना ब्रह्मर्षिदैवरातसम्भ्रमसङ्गोष्ठी

कर्नाटकसंस्कृतविश्वविद्यालयेन वेदविज्ञानशोधसंस्थानस्य सहयोगेन जुलैमासस्य १३, १४ दिनाङ्कयोः **ब्रह्मर्षिदैवरातसम्भ्रमः** इत्याख्या दिनद्वयव्यापिनी राष्ट्रियविचारगोष्ठी चन्नेनहल्लीग्रामे विद्यमाने वेदविज्ञानशोधसंस्थाने आयोजिता। कार्यक्रमस्यास्य उद्घाटनं कर्नाटकसर्वकारस्य उन्नतशिक्षणसचिवेन डा. वि.एस् आचार्यवर्येण कृतम् । "कर्नाटकसंस्कृतविश्वविद्यालयः सुष्ठु कार्यं निर्वहन् वर्तते, संस्कृतं प्रति कर्नाटकराज्यस्य योगदानं द्योतयितुम् ईदृशाः विचारगोष्ठ्यः तदा तदा आयोजनीयाः । श्लाघनीयोऽयं प्रयासः" इति सः अवदत् । कर्नाटकसंस्कृतविश्वविद्यालयस्य कुलपतिः प्रो. मल्लेपुरं जि वेङ्कटेशवर्यः प्रास्ताविकवचनानि कथयन् कर्नाटकसंस्कृतविश्वविद्यालयस्य लक्ष्यं, तदर्थम् आदृतायाः कार्यप्रणाल्याः स्वरूपं च व्यावृणोत्। वेदविज्ञानशोधसंस्थानस्य निदेशकाः प्रो. रामचन्द्रभ वर्याः महर्षेः दैवरातस्य महिमां वैशिष्ट्यं च प्रापञ्चयन् । आशयभाषणं कुर्वन् राष्ट्रियसंस्कृतसंस्थानस्य भूतपूर्वः कुलपतिः प्रो. वि. कुटुम्बशास्त्रिवर्यः – "संस्कृतम् अनधीत्यापि महर्षिः दैवरातः स्वस्य आध्यात्मिकसाधनया वेदमेव प्रत्यक्षसात्कृतवान्" इति स्वाभिप्रायं प्राकटयत्। अस्मिन् कार्यक्रमे वेदमूर्तिः विद्वान् साम्बदीक्षितदामोदरोपाध्यायवर्यः, महर्षेः दैवरातस्य पुत्रः देवश्रवशर्मा च सम्मानितौ । तद्दिने मध्याह्ने केनरामहाविद्यालयस्य प्राचार्यस्य प्रो. जि.एन्. भट्महोदयस्य आध्यक्ष्ये सञ्चालितायां गोष्ठ्यां महर्षेः दैवरातस्य इतिवृत्तं, महर्षिः दैवरातः समकालीनविद्वांसश्च, महर्षिः दैवरातः तथा आधुनिकजीवनदृष्टिः इति विषयेषु विद्वांसः विचारान्




**वेदविज्ञानशोधसंस्थाने प्रवृत्तायाः ब्रह्मर्षिदैवरातसम्भ्रमसङ्गोष्ठ्याः किञ्चन दृश्यम् ।**

प्रास्तुवन् ।

द्वितीये दिने (१४ दिनाङ्के) शतावधानिनः आर्. गणेशवर्यस्य आध्यक्ष्ये विद्वांसः महर्षेः दैवरातस्य छन्दोदर्शनस्य महत्त्वं, तथा महर्षेः दैवरातस्य वेदवेदिका इत्यादीनां ग्रन्थानां विषये विचारप्रस्तावम् अकुर्वन् । तस्मिन् दिने मध्याह्ने प्रो. एम्. शिवकुमारस्वामिवर्यस्य आध्यक्ष्ये समकालीनाध्यात्मिकसाधकैः सह महर्षेः दैवरातस्य तुलना इति विषये चर्चा समचलत् । सायं कर्नाटकसंस्कृतविश्वविद्यालयस्य कुलसचिवस्य प्रो. चन्द्रमौलि एस्. नाय्करमहोदयस्य आध्यक्ष्ये समारोपकार्यक्रमः समभवत्। मुख्यातिथिस्थानम् अलङ्कृतवान् महर्षेः दैवरातस्य छन्दोदर्शनग्रन्थस्य आङ्ग्लानुवादकः प्रो. एस्. आर्. मळगिवर्यः, छन्दोदर्शनस्य महत्त्वं प्राख्यापयत् ।

दिनद्वयस्य सङ्गोष्ठ्यामस्यां कर्णाटकस्य संस्कृतपाठशालानाम् अध्यापकाः, विचारप्रियाश्च उपस्थिताः आसन् ।

# ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ, ಬೆಂಗಳೂರು

## – ಒಂದು ಕಿರುಪರಿಚಯ



ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ

**ಕ**ರ್ನಾಟಕದ ರಾಜಧಾನಿಯಾದ ಬೆಂಗಳೂರು ನಗರದಲ್ಲಿ ಚಿನ್ನದ ಕಲಶದ ಗೋಪುರದಿಂದ ಶೋಭಿಸುತ್ತಿರುವ 'ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯವು' ಭವ್ಯ ಇತಿಹಾಸದಿಂದ ಕೂಡಿದೆ. ಕ್ರಿ.ಶ. 1885ರಲ್ಲಿ ವಾಣೀ ವಿದ್ಯಾಶಾಲಾ' ಎಂಬ ಹೆಸರಿನಿಂದ ಅನೇಕ ಸಂಸ್ಕೃತಾಭಿಮಾನಿಗಳ ಮತ್ತು ವಿದ್ಯಾ ಇಲಾಖೆಯ ಸಹಯೋಗದಿಂದ ಇದು ಜನ್ಮ ತಳೆಯಿತು. ಇಲ್ಲಿ ಅಲಂಕಾರ, ವೇದ, ಯೋಗ, ಶಾಸ್ತ್ರಗಳಲ್ಲಿ ವಿದ್ವಾಂಸರಿಂದ ತರಬೇತಿ ನೀಡಲಾಗುತ್ತಿತ್ತು. 1889ರಲ್ಲಿ ಈ ಶಾಲೆಗೆ 'ವಾಣೀ ಸಂಸ್ಕೃತ ಕಾಲೇಜು' ಎಂದು ನಾಮಕರಣ ಮಾಡಿ ಹೆಚ್ಚಿನ ವ್ಯಾಸಂಗಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಒಂದು ಆಡಳಿತ ಸಮಿತಿಯೊಂದು ರೂಪುಗೊಂಡು ಶಾಲೆಯ ಮೇಲ್ವಿಚಾರಣೆಯನ್ನು ವಹಿಸಿಕೊಂಡಿತು.

1896ರಲ್ಲಿ ಶಾಲೆಗೆ ಪ್ರತ್ಯೇಕ ಕಟ್ಟಡವೊಂದು ದೊರಕಿದ್ದು 'ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು' ಎಂಬ ನೂತನ ಹೆಸರಿನಿಂದ ಬೆಳೆದ ಈ ವಿದ್ಯಾಲಯದಲ್ಲಿ ವ್ಯಾಕರಣ, ತರ್ಕ, ಅಲಂಕಾರ, ವೇದ –ಇವುಗಳಲ್ಲಿ ಅನೇಕ ವಿದ್ವಾಂಸರಿಂದ ಉತ್ತಮ ರೀತಿಯ ಶಿಕ್ಷಣವನ್ನು ನೀಡಲಾಗುತ್ತಿತ್ತು. ಆಗಿನ ಮೈಸೂರು ಸರ್ಕಾರದ ಧನಸಹಾಯದೊಂದಿಗೆ, ಶೃಂಗೇರಿ, ಪರಕಾಲ ಮೊದಲಾದ ಮಠಗಳ ಸಹಾಯವೂ ಪ್ರತಿ ತಿಂಗಳಲ್ಲಿ ಒದಗಿಬಂದು ಕಾಲೇಜು ಪ್ರವರ್ಧಮಾನವಾಯಿತು.

1924ರಲ್ಲಿ ವೇದ ಹಾಗೂ ಶಾಸ್ತ್ರಗಳೆರಡರಲ್ಲಿಯೂ ಶಿಕ್ಷಣ ನೀಡಲಾಗುತ್ತಿದ್ದ ಈ ಕಾಲೇಜಿನಲ್ಲಿ ವೇದಭಾಗವು ಮುಜರಾಯಿ ಇಲಾಖೆಯಲ್ಲಿಯೇ ಉಳಿದು 'ಶ್ರೀ ಚಾಮರಾಜೇಂದ್ರ ವೇದ ಮಹಾಪಾಠಶಾಲಾ' ಎಂಬ ಹೆಸರಿನಿಂದ ಮುಂದುವರಿಯಿತು. ಶಾಸ್ತ್ರ ವ್ಯಾಸಂಗವು ಮೈಸೂರು ಸರ್ಕಾರದ ವಿದ್ಯಾ ಇಲಾಖೆಗೆ ಸೇರಿ 'ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು' ಎಂಬ ಹೆಸರನ್ನು ಪಡೆಯಿತು. ಈ ಸಮಯದಲ್ಲಿ ಎಲ್ಲಾ ವಿಧದ ಜನಾಂಗದವರೂ ಸಂಸ್ಕೃತಪ್ರೇಮಿಗಳಾಗಿ ಶಾಸ್ತ್ರಾಧ್ಯಯನಕ್ಕೆ ಬರುತ್ತಿದ್ದರು.

1940ರ ಸುಮಾರಿನಲ್ಲಿ ಆಗಿನ ಮೈಸೂರಿನ ದಿವಾನರಾಗಿದ್ದ ಶ್ರೀಯುತ ಸರ್ ಮಿರ್ಜಾ ಇಸ್ಮಾಯಿಲ್‌ರವರು ಪಂಪಮಹಾಕವಿ ರಸ್ತೆ, ಚಾಮರಾಜಪೇಟೆಯಲ್ಲಿ ಈಗಿನ 300 + 200 ಅಡಿ ವಿಶಾಲವಾದ ನಿವೇಶನದಲ್ಲಿ ಸರ್ಕಾರದ ಧನಸಹಾಯದೊಂದಿಗೆ ಕಾಲೇಜಿನ ಭವ್ಯ ಭವನವನ್ನು ಕಟ್ಟಿಸಿಕೊಟ್ಟಿರುವರೆಂದು ತಿಳಿದುಬರುತ್ತದೆ.

1948ರಲ್ಲಿ ಈ ಕಾಲೇಜಿನಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ವೇದಾಂತಗಳು ಮತ್ತು 1955ರಲ್ಲಿ ಜೈನಸಿದ್ಧಾಂತವೂ ಪಾಠ್ಯವಿಷಯಗಳಾಗಿ ಸೇರ್ಪಡೆಗೊಂಡವು. ಈ ಸಮಯದಲ್ಲಿಯೇ ಪ್ರಥಮಾ, ಕಾವ್ಯ, ಸಾಹಿತ್ಯ, ವಿದ್ವನ್ಮಧ್ಯಮಾ, ವಿದ್ವದುತ್ತಮಗಳೆಂಬ 13 ವರ್ಷಗಳ ಅಧ್ಯಯನಾವಧಿಯನ್ನು ಶಾಸ್ತ್ರಭಾಗದಲ್ಲಿ ವ್ಯಾಸಂಗವೇರ್ಪಟ್ಟು 13 ಜನ ವಿದ್ವಾಂಸರು ಹಾಗೂ ನಾಗರಿಕರುಳ್ಳ ಒಂದು ಸಮಿತಿಯಿಂದ ವಾರ್ಷಿಕ ಪ್ರಸಿದ್ಧ ಪರೀಕ್ಷೆಗಳು ನಡೆಸಲ್ಪಡುತ್ತಿದ್ದವು.

1927 ಜೂನ್ 30ರಂದು ಶ್ರೀಯುತ ಮದನಮೋಹನ ಮಾಳವೀಯರವರು ಈ ಕಾಲೇಜಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಇಲ್ಲಿ ವಿದ್ಯಾರ್ಥಿಗಳ ವಿದ್ಯಾರ್ಜನೆಯ ಉತ್ಸಾಹವನ್ನು ನೋಡಿ ಗರುಡಪುರಾಣ, ಅಗ್ನಿಪುರಾಣಗಳ ಶ್ಲೋಕಗಳನ್ನು ಉದಾಹರಿಸಿ ಶ್ರೀಯುತರು ಸಂಸ್ಕೃತ ಮತ್ತು ವೇದಾಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಭೋಜನ ಮತ್ತು ಪುಸ್ತಕಗಳನ್ನು ದಾನ ಮಾಡುವಂತೆ ಸಾರ್ವಜನಿಕರನ್ನು ಪ್ರಾರ್ಥಿಸಿದ್ದಾರೆ.

1953ರಲ್ಲಿ ಮುಜರಾಯಿ ಇಲಾಖೆಯಲ್ಲಿದ್ದ ವೇದ ಮಹಾಪಾಠಶಾಲೆಯು ಈ ಸಂಸ್ಕೃತ ಕಾಲೇಜಿನಲ್ಲಿ ಪುನಃ ಸೇರಿ 'ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು' ಎಂಬ ಹೆಸರಿನಿಂದ ಈಗಲೂ ಮುಂದುವರಿದಿದೆ. ಈಗ ಒಂದು ಪ್ರಾಚೀನ ಸಂಸ್ಕೃತ ಹಾಗೂ ವೇದಗಳ ಶಿಕ್ಷಣ ಕೇಂದ್ರವಾಗಿದೆ. ಇಲ್ಲಿ ವೇದ ವಿಭಾಗದಲ್ಲಿ ಋಗ್ವೇದ, ಕೃಷ್ಣಯಜುರ್ವೇದ, ಶುಕ್ಲಯಜುರ್ವೇದ, ಸಾಮವೇದಗಳಲ್ಲಿ 14 ವರ್ಷಗಳ ಶಿಕ್ಷಣ ನೀಡಲಾಗುತ್ತದೆ ಮತ್ತು ಶಾಸ್ತ್ರಗಳಲ್ಲಿ ಅಲಂಕಾರ, ವ್ಯಾಕರಣ, ನವೀನನ್ಯಾಯ, ಅದ್ವೈತವೇದಾಂತ, ದ್ವೈತವೇದಾಂತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಹಾಗೂ ಜೈನಸಿದ್ಧಾಂತ, ವಿಭಾಗದಲ್ಲಿ 5 ವರ್ಷಗಳ ಶಿಕ್ಷಣ ನೀಡಲಾಗುತ್ತದೆ. ಇದಕ್ಕೆ ಪೂರ್ವಭಾವಿಯಾಗಿ ಸಂಸ್ಕೃತ ಭಾಷೆಯ ಪಾಂಡಿತ್ಯಕ್ಕಾಗಿ 8 ವರ್ಷಗಳ ಶಿಕ್ಷಣ ನೀಡಲಾಗುತ್ತದೆ. 13 ವರ್ಷಗಳ ಅಧ್ಯಯನದ ನಂತರ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 'ವಿದ್ವಾನ್' ಎಂಬ ಬಿರುದನ್ನು ನೀಡಿ ಗೌರವಿಸುವುದು. ಈಗ ಅಂತಹ ಪದವೀಧರರು ಕೇಂದ್ರೀಯ ವಿದ್ಯಾಲಯ, ಪ್ರೌಢಶಾಲೆ ಹಾಗೂ ಸಂಸ್ಕೃತ ಕಾಲೇಜುಗಳಲ್ಲಿ ವೃತ್ತಿಯಲ್ಲಿರುತ್ತಾರೆ.

ಈ ಮಹಾವಿದ್ಯಾಲಯದಲ್ಲಿ ಸಾವಿರಾರು ವಿದ್ಯಾರ್ಥಿಗಳು ಅಧ್ಯಯನ ನಡೆಸಿ ವಿದ್ವಾಂಸರಾಗಿರುತ್ತಾರೆ. ಗಣ್ಯವ್ಯಕ್ತಿಗಳೂ ಸಮಾಜದಲ್ಲಿ ಆಗಿರುತ್ತಾರೆ. ಉದಾ: ಆದಿಚುಂಚನಗಿರಿ ಮಠಾಧಿಪತಿಗಳಾದ ಬಾಲಗಂಗಾಧರನಾಥ ಸ್ವಾಮಿಗಳು, ಬೇಲಿಮಠದ ಶಿವರುದ್ರಸ್ವಾಮಿಗಳು, ಕೊಳದಮಠದ ಶಾಂತವೀರ ಮಹಾಸ್ವಾಮಿಗಳು, ಪಂಡಿತರಾದ ಎನ್.ಟಿ. ಶ್ರೀನಿವಾಸ ಅಯ್ಯಂಗಾರ್, ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತ ಎನ್. ರಂಗನಾಥಶರ್ಮ ಅವರು ಇಲ್ಲಿ ಅಧ್ಯಯನ ನಡೆಸಿದವರು.

ಈ ಕಾಲೇಜಿನಲ್ಲಿ ಒಂದು ಪ್ರಾಚೀನ ಗ್ರಂಥಾಲಯವಿದೆ. 'ವಾಣೀ ಸಂಸ್ಕೃತ ಭಂಡಾರ'ವೆಂಬ ಹೆಸರಿನ ಈ ಗ್ರಂಥಾಲಯದಲ್ಲಿ ಪ್ರಾಚೀನ ಗ್ರಂಥಗಳಿಂದ ಕೂಡಿದ ಸುಮಾರು 8500 ಪುಸ್ತಕಗಳು ಇಲ್ಲಿ ಇವೆ. ಇವುಗಳಲ್ಲಿ ಹೆಚ್ಚಿನವು ಮೈಸೂರಿನ ರಾಜರು ಉದಾರವಾಗಿ ಕೊಟ್ಟವು ಮತ್ತು ಬೆಂಗಳೂರಿನ ನಾಗರಿಕರಿಂದ ಕೊಡಲ್ಪಟ್ಟ ಗ್ರಂಥಗಳು. ❑

**ಪ್ರಾಚಾರ್ಯರು**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು

# e-ಗ್ರಂಥಾಲಯದ ಉಪಯೋಗ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಮಾನ್ಯ ಕುಲಪತಿಗಳ ನೇತೃತ್ವದಲ್ಲಿ ಹೊಸ ಹೊಸ ಹೆಜ್ಜೆಗಳನ್ನಿಡುತ್ತಾ ಮುಂದುವರೆದು, ಇಂದಿನ ಜಗತ್ತು ಮಾಹಿತಿ ತಂತ್ರಜ್ಞಾನಾಧಾರಿತವಾಗುತ್ತಿರುವಾಗ ಸಂಸ್ಕೃತವೂ ಇದರಿಂದ ಹೊರತಾಗಬಾರದೆಂಬ ಮುಂದಾಲೋಚನೆಯಿಂದ ಈಗಾಗಲೇ ಸಂಸ್ಕೃತ ಹಾಗೂ ಸಂಗಣಕದಲ್ಲಿ ನುರಿತ ವಿದ್ವಾಂಸರನ್ನು ಸೇರಿಸಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಮಾನ್ಯ ನಿರ್ದೇಶಕರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿ, ವಿಶ್ವವಿದ್ಯಾಲಯದ ಆವರಣದಲ್ಲೇ e-Libraryಯ ಒಂದು ವಿಭಾಗವನ್ನು ನಡೆಸುತ್ತಿದೆ. ಅದಕ್ಕಾಗಿ ಒಂದು ಅಂತರ್ಜಾಲ ಸಂಪರ್ಕ ಕೇಂದ್ರ(e-mail)ವನ್ನು ರಚಿಸಿ ಯಾರು ಬೇಕಾದರೂ ಇದರ ಸದುಪಯೋಗ ಪಡೆದುಕೊಳ್ಳಬಹುದೆಂದು ತಿಳಿಸಲಾಗಿತ್ತು. ಅದರಂತೆ Sushrutha S, Lecturer, PhD Scholar, S-VYASA University, Bengaluru ಇವರು 'ಸಿದ್ಧಾಂತಕೌಮುದೀ' ಗ್ರಂಥದ ಒಂದು ಪ್ರತಿಯನ್ನು ಕೇಳಿದ್ದರು. ಅದರಂತೆ ಅವರಿಗೆ ಆ ಗ್ರಂಥದ e-ಪ್ರತಿ ಲಭಿಸುವ ವಿಳಾಸವನ್ನು ತಿಳಿಸಲಾಯಿತು.

e-ಗ್ರಂಥಾಲಯದ ಬಗ್ಗೆ ಅನೇಕರು ಕೇಳುತ್ತಿರುವ ಎರಡು ಪ್ರಶ್ನೆಗಳ ಬಗ್ಗೆ ಈ ಸಂಚಿಕೆಯಲ್ಲಿ ವಿಚಾರ ಮಾಡಲಾಗಿದೆ.

**ಪ್ರಶ್ನೆ-01:** e-Libraryಯನ್ನು ಹೊಸದಾಗಿ ವಿಶ್ವವಿದ್ಯಾಲಯವು ನಿರ್ಮಾಣ ಮಾಡಿದೆಯೇ?

**ಉ:** ಇಲ್ಲ. ಇಂದು ಸಹಜವಾಗಿ ಅಂತರ್ಜಾಲದಲ್ಲಿ ಅನೇಕ ಸಂಸ್ಕೃತಾಭಿಮಾನಿಗಳು ತಾವು ಕಂಪ್ಯೂಟರ್‌ನಲ್ಲಿ ಟಂಕಿಸಿ ಅವುಗಳನ್ನು .txt ಅಥವಾ .pdf ರೂಪಗಳಲ್ಲಿ ಸೇರಿಸಿದ್ದಾರೆ. ಅವುಗಳನ್ನು ಅಂತರ್ಜಾಲದಿಂದ ಸ್ವೀಕರಿಸಿ ನಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ಹೇಗೆ ಬಳಸಿಕೊಳ್ಳಬಹುದು ಎನ್ನುವುದನ್ನು ವಿಶ್ವವಿದ್ಯಾಲಯವು ತೋರಿಸಿಕೊಡುತ್ತಿದೆ.

**ಪ್ರಶ್ನೆ-02:** ಈ e-ಪ್ರತಿಗಳನ್ನು ನಾವು ಹೇಗೆ ಪಡೆಯಬಹುದು?

**ಉ:** ತುಂಬಾ ಸುಲಭ! ಮೊದಲಿಗೆ ನಮ್ಮ ಮನೆಗಳಲ್ಲಿ ಒಂದು ಕಂಪ್ಯೂಟರ್‌ನ ಆವಶ್ಯಕತೆಯಿದ್ದು, ಅಂತರ್ಜಾಲದ ಸಂಪರ್ಕವನ್ನು ಹೊಂದಿರಬೇಕು. ಆ ನಂತರ ಇಂಟರ್‌ನೆಟ್ ಪೇಜ್ ತೆಗೆದು www.sanskritdocuments.org ಟೈಪ್ ಮಾಡಿದರೆ ಆ ಪೇಜ್‌ನಲ್ಲಿ ಸಾಧ್ಯವಾದಷ್ಟು ಸಂಸ್ಕೃತ ಗ್ರಂಥಗಳ e-ಪ್ರತಿಗಳು ಸಿಗುತ್ತವೆ. http://sa.wiki source.org, http://sanskrit.inria.fr/portal.html ಮುಂತಾದ ತಾಣಗಳಿಂದಲೂ ಪಡೆಯಬಹುದು.

e-ಗ್ರಂಥಾಲಯದ ಬಗ್ಗೆ ಆಸಕ್ತರು ತಮ್ಮ ಪ್ರಶ್ನೆಗಳನ್ನು ಕಳಿಸಿಕೊಡಬಹುದು.

**ನಮ್ಮ ವಿಳಾಸ: info.elib@gmail.com.**

# ಸಂಸ್ಕೃತ ಮತ್ತು ಕನ್ನಡ ಸಂಬಂಧ

**ಸರ್ವಜ್ಞಂ ತದಹಂ ವಂದೇ ಪರಂಜ್ಯೋತಿಸ್ತಮೋಪಹಮ್ ।**
**ಪ್ರವೃತ್ತಾಯನ್ಮುಖಾದೇವೀ ಸರ್ವಭಾಷಾ ಸರಸ್ವತೀ ॥**

(ನಾಗವರ್ಮಕೃತ ಭಾಷಾಭೂಷಣೇ ಮಂಗಲಶ್ಲೋಕಃ)

ದಕ್ಷಿಣ ಭಾರತೀಯ ಭಾಷೆಗಳು ಐದು. ತಮಿಳು, ಕನ್ನಡ, ಮಲೆಯಾಳಂ, ಮರಾಠಿ ಮತ್ತು ತೆಲುಗು. ಈ ಐದು ಭಾಷೆಗಳಿಗೂ ಪರಸ್ಪರ ಸಾಂಗತ್ಯ ಉಂಟು. ದಕ್ಷಿಣ ಭಾರತೀಯ ಭಾಷೆಗಳಲ್ಲಿ ಅತಿಪ್ರಾಚೀನವಾದುದು ತಮಿಳು. ಅನಂತರ ಕನ್ನಡ. ಈ ಐದು ಭಾಷೆಗಳು ಸಂಸ್ಕೃತದ ಜತೆ ಗಾಢವಾದ ಸಂಬಂಧವನ್ನು ಬಹು ಪುರಾತನ ಕಾಲದಿಂದ ಇಟ್ಟುಕೊಂಡು ಬಂದಿವೆ. ಈ ಸಂಬಂಧಗಳು ಭಾಷಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕವೆಂದು ಮೂರು ನೆಲೆಗಳಲ್ಲಿ ಹರಡಿಕೊಂಡಿವೆ. ಅವು ಬಹು ಗಟ್ಟಿಯಾಗಿಯೂ ಆಳವಾಗಿಯೂ ಇವೆ. ಸಂಸ್ಕೃತ ಮತ್ತು ಕನ್ನಡದ ಸಂಬಂಧವನ್ನು ಈ ಮೂರೂ ಸ್ತರಗಳಲ್ಲಿಯೂ ನೋಡಬಹುದು. ಇವೆರಡರ ಸಂಬಂಧ ಆಳವೂ ಮಧುರವೂ ಆಗಿದೆ. ನೂತನ ಪರಿಭಾಷೆಯಲ್ಲಿ ಹೇಳುವುದಾದರೆ: ತಾಯಿ–ಮಗಳ ಸಂಬಂಧ ಇದ್ದಂತೆ ಎಂದು ಹೇಳಬಹುದು. ಸಂಸ್ಕೃತವೆಂಬ ಮಾತೆಯು ಎಲ್ಲ ದೇಶೀಯ ಭಾಷೆಗಳಿಗೂ ಶಕ್ತಿಸಂಚಯನ ನೀಡಿದೆ. ಕನ್ನಡವು ಸಂಸ್ಕೃತದಿಂದ ನಿರ್ವಿವಾದವಾಗಿ ಶಕ್ತಿಯನ್ನೂ ಸಂಪತ್ತನ್ನೂ ಒಂದೂವರೆ ಸಾವಿರ ವರ್ಷಗಳಿಂದ ಪಡೆದುಕೊಂಡು ಬಂದಿದೆ.

**ಭಾಷಿಕ ಸಂಬಂಧ:**

ನಾವು ಸಂಸ್ಕೃತ–ಕನ್ನಡ ಸಂಬಂಧವನ್ನು ಮೊದಲು ಭಾಷಿಕವಾಗಿ ಚರ್ಚಿಸಬಹುದು. ಕನ್ನಡವು ಸಂಸ್ಕೃತ ಪದಗಳನ್ನು ಸಮಸಂಸ್ಕೃತ ರೂಪದಲ್ಲಿ ಸ್ವೀಕರಿಸಿದೆ. ಅಕ್ಷರಮ್ ಎಂಬ ಪದವನ್ನು ಅನುಸ್ವಾರವನ್ನು ಬಿಟ್ಟು ನೇರವಾಗಿ 'ಅಕ್ಷರ' ಎಂದು ಸ್ವೀಕರಿಸಿದೆ. ಈ 'ಅಕ್ಷರ'ವು ತದ್ಭವವಾಗಿ 'ಅಕ್ಕರ' ಎಂಬ ಮತ್ತೊಂದು ರೂಪವನ್ನು ಪಡೆದುಕೊಂಡಿದೆ. ಪ್ರತಿಯೊಂದು ಸಂಸ್ಕೃತದ ನಾಮವಾಚಕಗಳು ಕನ್ನಡಕ್ಕೆ ಚೆನ್ನಾಗಿ ಹೊಂದಿಕೊಂಡಿವೆ. ಸಂಸ್ಕೃತದ ವಿಸರ್ಗ ಮತ್ತು ಅನುಸ್ವಾರಗಳನ್ನು ಬಿಟ್ಟುಕೊಟ್ಟ ಅಸಂಖ್ಯಾತ ಸಂಸ್ಕೃತ ಪದಗಳು ಕನ್ನಡ ಪದಗಳಾಗಿರುವುದನ್ನು ನಾವು ಗಮನಿಸಬೇಕು. 'ಸಂಸ್ಕೃತಮ್' ಎಂಬ ಪದ 'ಸಂಸ್ಕೃತ' ಆಗಿ ಮುಂದೆ 'ಸಕ್ಕದ' ಎಂದು ತದ್ಭವೀಕರಣಗೊಂಡಿರುವುದನ್ನು ಗಮನಿಸಬಹುದು. ಈ ಪ್ರಕ್ರಿಯೆಯು ವ್ಯಾವಹಾರಿಕ ಭಾಷೆಯಲ್ಲೂ ಶಾಸ್ತ್ರಭಾಷೆಯಲ್ಲೂ ಸಾಹಿತ್ಯಿಕಭಾಷೆಯಲ್ಲೂ ನಿರಂತರವಾಗಿ ನಡೆದಿದೆ. ಕನ್ನಡ ಭಾಷೆಯು ಹೀಗೆ ನಿರಂತರವಾಗಿ ಸಂಸ್ಕೃತದ ನುಡಿಬಳಕೆಯನ್ನು ಪಡೆಯದೆ ಹೋಗಿದ್ದರೆ– ಕನ್ನಡ ಮೈದುಂಬಲು ಸಾಧ್ಯವಾಗುತ್ತಿರಲಿಲ್ಲ. ಸಂಧಿ, ಸಮಾಸ ಮತ್ತು ಕೃತ್ತದ್ಧಿತಗಳಲ್ಲಿ ಸಂಸ್ಕೃತ–ಕನ್ನಡ ಸಂಬಂಧವನ್ನು ನಾವು ಕಾಣಬಹುದು. ಸಂಸ್ಕೃತ–ಸಂಸ್ಕೃತ ಪದಗಳು ಸಂಧಿ, ಸಮಾಸ ಆಗುವಂತೆ ಸಂಸ್ಕೃತ–ಕನ್ನಡ ಪದಗಳು ಸಂಧಿ–ಸಮಾಸಗಳು ಆಗುವುದುಂಟು. ಕರ್ನಾಟಕದ ಮೊದಲ ಲಕ್ಷಣಕಾರನಾದ ಕವಿರಾಜಮಾರ್ಗಕಾರ, ಕನ್ನಡ ಮತ್ತು ಸಂಸ್ಕೃತ ಸಂಬಂಧವನ್ನು ಮಧುರವೂ ಗುಣಾತ್ಮಕವೂ ಆದುದೆಂದು ಹೇಳುತ್ತಾನೆ. ಅವನ ನಂತರ ಬಂದ ನಾಗವರ್ಮನೆಂಬ ಲಾಕ್ಷಣಿಕನು ಸಂಸ್ಕೃತದ ಶಾಸ್ತ್ರಪದ್ಧತಿಯನ್ನು ಅನುಸರಿಸಿ ಕನ್ನಡಕ್ಕೆ ವ್ಯಾಕರಣ ಬರೆಯುತ್ತಾನೆ. ಸೂತ್ರ ಮತ್ತು ವೃತ್ತಿ ಪದ್ಧತಿಯನ್ನು ಕನ್ನಡಕ್ಕೆ ಪರಿಚಯಿಸಿದವನು ನಾಗವರ್ಮನೇ. ಇವನು ಹಾಕಿಕೊಟ್ಟ ಹಾದಿಯನ್ನು ಹಿಡಿದು ಮುಂದೆ ಕನ್ನಡ ವ್ಯಾಕರಣವನ್ನು ವಿಸ್ತಾರವಾಗಿ ನಿರೂಪಿಸಿದ ಕೀರ್ತಿ 16ನೇ ಶತಮಾನದ ಭಟ್ಟಾಕಳಂಕನೆಂಬ ವೈಯಾಕರಣಿಗೆ ಸೇರುತ್ತದೆ. ಅವನು ಬರೆದ 'ಶಬ್ದಾನುಶಾಸನಂ' ಸೂತ್ರ, ವೃತ್ತಿ ಮತ್ತು ಲಕ್ಷ್ಯಗಳಿಂದ ಒಡಗೂಡಿದೆ. ಕನ್ನಡ ಭಾಷೆಯ ಮಹತ್ತ್ವವನ್ನು ಸಂಸ್ಕೃತಜ್ಞರಿಗೆ, ಭಾರತೀಯರಿಗೆ ಪರಿಚಯಿಸಿದ ಕೀರ್ತಿ ಇವರಿಬ್ಬರಿಗೂ ಸೇರುತ್ತದೆ. ನಾಗವರ್ಮನ 'ಕರ್ಣಾಟಕ ಭಾಷಾಭೂಷಣಮ್' ಮತ್ತು ಭಟ್ಟಾಕಳಂಕನ 'ಕರ್ಣಾಟಕ ಶಬ್ದಾನುಶಾಸನಮ್' –ಇವೆರಡು ಮಹತ್ತ್ವದ ಸಂಸ್ಕೃತ ಕೃತಿಗಳು.

ಭಾಷೆ, ವ್ಯಾಕರಣದ ವಿಷಯದಲ್ಲಿ ಹೇಳಬಹುದಾದ ಮಾತುಗಳನ್ನು ಛಂದಸ್ಸಿಗೂ ಹೇಳಬಹುದು. ನಾಗವರ್ಮನ 'ಛಂದೋಂಬುಧಿ' ಎಂಬ ಗ್ರಂಥವು – ಪಿಂಗಲನ 'ಛಂದಶಾಸ್ತ್ರ', ಜಯದೇವನ 'ಜಯದೇವಚ್ಛಂದಸ್', ಜನಾಶ್ರಯನ 'ಜನಾಶ್ರಯೀ' ಹಾಗೂ ಕೇದಾರಭಟ್ಟನ 'ವೃತ್ತರತ್ನಾಕರ'ಕ್ಕೆ ಋಣಿಯಾಗಿದೆ. ವರ್ಣವೃತ್ತ, ಮಾತ್ರಾವೃತ್ತಗಳು ಕನ್ನಡ ಕಾವ್ಯದಲ್ಲಿ ವಿಫುಲವಾಗಿ ಬಳಕೆಯಾಗಿವೆ. ನಾಗವರ್ಮನು ತನ್ನ ಗ್ರಂಥದ ಆರಂಭದಲ್ಲಿ ಸಂಸ್ಕೃತ ಛಂದಶ್ಶಾಸ್ತ್ರದ ಕ್ರಮವನ್ನು ಅನುಸರಿಸಿದ್ದೇನೆಂದು ಹೇಳುತ್ತಾನೆ. ಇದು ಸಂಸ್ಕೃತ ಛಂದೋಲೋಕವನ್ನು ಅನನ್ಯವಾಗಿ ಪರಿಚಯಿಸುತ್ತದೆ ಮತ್ತು ಅನ್ವಯಿಸುತ್ತದೆ. ಅನಂತರ ಬಂದ ಕನ್ನಡ ಛಂದೋಗ್ರಂಥಗಳು ಸಂಸ್ಕೃತ ಛಂದಶ್ಶಾಸ್ತ್ರ ಗ್ರಂಥಗಳಿಂದಲೂ ನಾಗವರ್ಮನ ಛಂದೋಂಬುಧಿಯಿಂದಲೂ

ಋಣಿಯಾಗಿವೆ. ಸಂಸ್ಕೃತ–ಕನ್ನಡ ಎರಡೂ ಹಿತವಾಗಿ ಬೆಳೆದಿರುವುದಕ್ಕೆ ಖ್ಯಾತ ಕರ್ನಾಟಕ ವೃತ್ತಗಳೇ ಸಾಕ್ಷಿ. ಸಂಸ್ಕೃತ ವೃತ್ತಗಳನ್ನು ಕನ್ನಡಕ್ಕೆ ಅನ್ವಯಿಸಿಕೊಳ್ಳುವ ಬಗೆಯನ್ನು ನಾವಿಲ್ಲಿ ಕಾಣುತ್ತೇವೆ. ಕನ್ನಡ ಕಾವ್ಯಗಳಲ್ಲಿ ಬಳಕೆಯಾಗಿರುವ ಹೆಚ್ಚಿನ ವೃತ್ತಗಳು ಸಂಸ್ಕೃತದ ವೃತ್ತಗಳೇ ಆಗಿವೆ. ಇದು ಸಂಸ್ಕೃತ ಮತ್ತು ಕನ್ನಡದ ಪಾರಸ್ಪರಿಕ ಸಾಂಗತ್ಯವನ್ನು ತಿಳಿಸುತ್ತದೆ! ಕನ್ನಡವು ಭಾಷೆಯ ದೃಷ್ಟಿಯಿಂದ, ವ್ಯಾಕರಣದ ದೃಷ್ಟಿಯಿಂದ, ಛಂದೋದೃಷ್ಟಿಯಿಂದ ಸಂಸ್ಕೃತಕ್ಕೆ ಬಹಳ ಋಣಿಯಾಗಿದೆ. ಪರಿಪುಷ್ಟಿಯುನ್ನು ಪಡೆದಿದೆ. ಇದು ಸಖ್ಯಭಾವಕ್ಕೆ ಸಂಕೇತವಾಗಿದೆ.

**ಸಾಹಿತ್ಯಿಕ ಸಂಬಂಧ:**

ಸಂಸ್ಕೃತ ಮತ್ತು ಕನ್ನಡ ಸಂಬಂಧಗಳು ಸಾಹಿತ್ಯಿಕ ದೃಷ್ಟಿಯಿಂದ ಗಮನಾರ್ಹವಾದುದು. ಪಂಪನು ಕನ್ನಡದ ಆದಿಕವಿ. ಈತ ವ್ಯಾಸರ ಮಹಾಭಾರತವನ್ನು ತೆಗೆದುಕೊಂಡು 'ವಿಕ್ರಮಾರ್ಜುನ ವಿಜಯಂ' ಆಗಿಸಿದ. ಇದು 'ಪಂಪ ಭಾರತಂ' ಎಂದು ಪ್ರಸಿದ್ಧಿಯನ್ನು ಪಡೆದಿದೆ. 'ವ್ಯಾಸಮುನೀಂದ್ರರ ಮಹಾಕಾವ್ಯವನ್ನು ಹೊಕ್ಕು ಈಜಿದ್ದೇನೆ. ಆದರೆ, ಕವಿ ವ್ಯಾಸನೆಂಬ ಗರ್ವ ನನಗಿಲ್ಲ' ಎಂದು ಹೇಳುತ್ತಾನೆ. ವ್ಯಾಸರ ಮಹಾಕೃತಿಯನ್ನು ಅನುಸರಿಸಿದ್ದಾನೆ. ಅಲ್ಲಲ್ಲಿ ಹಲವು ಪ್ರಸಂಗಗಳನ್ನೂ ಘಟನೆಗಳನ್ನೂ ವ್ಯತ್ಯಾಸ ಮಾಡಿದ್ದಾನೆ. ಆದರೆ, ಇವನ ಕಾವ್ಯದ ಮೇಲೆ, ಕಾಳಿದಾಸನ ಪ್ರಭಾವ ತುಂಬಾ ಆಗಿದೆ. ಶಾಕುಂತಲಾ ನಾಟಕದ ಹಲವಾರು ಶ್ಲೋಕಗಳನ್ನು ಅನುವಾದ ಮಾಡಿಕೊಂಡಿದ್ದಾನೆ. ತಾನು ವ್ಯಾಸ, ಕಾಳಿದಾಸ, ಬಾಣ ಮುಂತಾದ ಕವಿಗಳಿಗೆ ಋಣಿಯಾಗಿದ್ದೇನೆಂದು ಹೇಳುತ್ತಾನೆ. ಈತನ ಇನ್ನೊಂದು ಕಾವ್ಯ 'ಆದಿಪುರಾಣಂ'. ಸಂಸ್ಕೃತದ 'ಮಹಾಪುರಾಣಂ' ಕೃತಿಯ ಅನುವಾದ ಆಗಿದೆ. ಗುಣಭದ್ರನ 'ಪೂರ್ವಪುರಾಣಂ' ಕೃತಿಯನ್ನು ಬಹುಮಟ್ಟಿಗೆ ಪಂಪಕವಿಯು ಅನುಸರಿಸಿದ್ದಾನೆ. ಪಂಪಕವಿ, ಸಂಸ್ಕೃತ ಮಹಾಕಾವ್ಯಗಳ ಜತೆ ಉತ್ತಮ ಸಂಬಂಧವನ್ನೂ ಅವುಗಳ ಪ್ರಭಾವಕ್ಕೆ ತುಂಬಾ ಒಳಗಾಗಿದ್ದನೆಂದೂ ಹೇಳಬಹುದು. ಇವನ ನಂತರದ ರನ್ನ ಎಂಬ ಕವಿ 'ಸಾಹಸಭೀಮ ವಿಜಯಂ' ಎಂಬ ಕಾವ್ಯವನ್ನು ಬರೆದಿದ್ದಾನೆ. ಇವನು ಭಟ್ಟನಾರಾಯಣನ 'ವೇಣಿ ಸಂಹಾರಂ' ನಾಟಕದಿಂದ ತುಂಬಾ ಪ್ರಭಾವಿತಗೊಂಡು ಶ್ಲೋಕಗಳನ್ನೂ ವಾಕ್ಯಖಂಡಗಳನ್ನೂ ಇದ್ದಕ್ಕಿದ್ದಂತೆ ತೆಗೆದುಕೊಂಡಿದ್ದಾನೆ.

ಪಂಪ–ರನ್ನರ ತರುವಾಯ ಪೊನ್ನ, ಜನ್ನರು ಸಂಸ್ಕೃತದ ಕೃತಿಗಳನ್ನು ಕನ್ನಡಕ್ಕೆ ತಂದುಕೊಂಡಿದ್ದಾರೆ. ಜನ್ನನು ವಾದಿರಾಜನ 'ಯಶೋಧರ ಚರಿತಂ' ಕೃತಿಯನ್ನು ಕನ್ನಡಿಸಿದ್ದಾನೆ. ದುರ್ಗಸಿಂಹನ 'ಪಂಚತಂತ್ರ'ವು ಈಗ ದೊರಕದ ವಸುಭಾಗ ಭಟ್ಟನ 'ಪಂಚತಂತ್ರ'ದ ಕನ್ನಡ ಕೃತಿಯಾಗಿದೆ. ಕ್ರಿ.ಶ. 9ನೆಯ ಶತಮಾನದಿಂದ 11ನೆಯ ಶತಮಾನದವರೆಗೂ ಕನ್ನಡ–ಸಂಸ್ಕೃತಗಳೆರಡು ಪರಸ್ಪರ ಕೈಹಿಡಿದೇ ನಡೆದಿದ್ದವು. ಕನ್ನಡ ಕಾವ್ಯವು ಸಂಸ್ಕೃತದಿಂದ ಪರಿಪುಷ್ಟಿ ಮತ್ತು ಚೈತನ್ಯವನ್ನು ಪಡೆಯಿತೆಂಬುದು ನಿರ್ವಿವಾದ. 12ನೆಯ ಶತಮಾನದ ನಂತರ ಸಂಸ್ಕೃತ–ಕನ್ನಡ ಸಂಬಂಧ ಶಾಸ್ತ್ರಸಂಬಂಧಿಯಾಗಿ ಬೆಳೆಯಿತು. ಸಂಸ್ಕೃತದ ಶೈವಾಗಮ ಮತ್ತು ಉಪನಿಷತ್ತುಗಳ ಪ್ರಭಾವ ಹೆಚ್ಚಾಯಿತು. 'ವಚನಸಾಹಿತ್ಯ'ವು ಉಪನಿಷತ್ತು ಮತ್ತು ಶೈವಾಗಮಗಳ ನೆರವಿನಿಂದ 'ಶಾಸ್ತ್ರಸಮ್ಮತಿ'ಯನ್ನು ಪಡೆಯಿತು. ಅಲ್ಲಮಪ್ರಭು, ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಚೆನ್ನಬಸವಣ್ಣ ಮುಂತಾದವರು ತಮ್ಮ ವಚನಗಳಿಗೆ ಶಾಸ್ತ್ರಾಧಾರವಾಗಿ ಹತ್ತಾರು ನೂರಾರು ಆಗಮ ಮತ್ತು ಶ್ರುತಿಗಳಿಂದ ಶ್ಲೋಕಗಳನ್ನು ಬಳಸಿಕೊಳ್ಳುತ್ತಾರೆ. ಇದು ಕನ್ನಡ ಮತ್ತು ಸಂಸ್ಕೃತದ ಶಾಸ್ತ್ರಸಂಬಂಧವನ್ನು ತಿಳಿಸುತ್ತದೆ! ದಾಸ ಸಾಹಿತ್ಯವು ದ್ವೈತತತ್ತ್ವವಾದವನ್ನು ಆಧಾರವಾಗಿಟ್ಟುಕೊಂಡು ಬೆಳೆಯಿತು. ವ್ಯಾಸ ಪರಂಪರೆಯು ದಾಸಪರಂಪರೆಯಲ್ಲಿ ವಿಹಿತವಾಗಿ ಸೇರಿಕೊಂಡಿತು. ಅನೇಕ ದಾಸರು ಸಂಸ್ಕೃತ ಮತ್ತು ಕನ್ನಡ ಎರಡು ಭಾಷೆಗಳಲ್ಲೂ ಕೃತಿ ರಚನೆ ಮಾಡಿದರು. ಜಗನ್ನಾಥದಾಸರ 'ಹರಿಕಥಾಮೃತಸಾರ'ವು 'ದ್ವೈತಸಿದ್ಧಾಂತ'ದ ಸಾರವನ್ನು ಪಡೆದಿದೆ. ಈ ಕೃತಿಯಲ್ಲಿ ಮಧ್ವಮತದ ಪ್ರಕ್ರಿಯೆ, ಸರಳವೂ ಸುಬೋಧವೂ ಆಗಿದೆ. ವ್ಯಾಸರಾಯರು ಮತ್ತು ವಾದಿರಾಜರು ಕನ್ನಡ ಮತ್ತು ಸಂಸ್ಕೃತದ ಸಂಬಂಧಗಳನ್ನು ಜೋಡಿಸಿದ್ದಾರೆ. ಇವರಿಬ್ಬರು ಕನ್ನಡ ಕೃತಿಗಳನ್ನೂ ಸಂಸ್ಕೃತ ಕೃತಿಗಳನ್ನೂ ರಚಿಸಿದ್ದಾರೆ. ದಾಸಸಾಹಿತ್ಯವು ಸಂಸ್ಕೃತವನ್ನು ಆತ್ಮೀಯತೆಯಿಂದ ಅಪ್ಪಿಕೊಂಡಿದೆ, ಒಪ್ಪಿಕೊಂಡಿದೆ. ಇದೇ ಕಾಲದಲ್ಲಿ ಸಂಸ್ಕೃತದ ವ್ಯಾಖ್ಯಾನ ಪರಂಪರೆಯನ್ನು ಅನುಸರಿಸಿ ಕನ್ನಡದ ಅನೇಕ ಕೃತಿಗಳಿಗೆ ವ್ಯಾಖ್ಯಾನ ಮತ್ತು ಟೀಕುಗಳು ರಚನೆಗೊಂಡವು.

ಕನ್ನಡದ ಅನೇಕ ಕಾವ್ಯಗಳಲ್ಲಿ ಪ್ರಸಂಗ, ಸನ್ನಿವೇಶ, ಪಾತ್ರ ಮತ್ತು ಇತಿವೃತ್ತಗಳು ಸಂಸ್ಕೃತದ ಸಂಬಂಧವನ್ನು ಸದಾ ಹೊಂದಿದ್ದವು. ಕನ್ನಡದ ಮುಖ್ಯ ಕವಿಗಳಾದ ಪಂಪ, ರನ್ನ, ಜನ್ನ, ನೇಮಿಚಂದ್ರ, ರುದ್ರಭಟ್ಟ, ಷಡಕ್ಷರಿ ಮುಂತಾದ ಹಳಗನ್ನಡ ಕವಿಗಳೂ ಹರಿಹರ, ರಾಘವಾಂಕ, ಲಕ್ಷ್ಮೀಶ, ತೊರವೆ ನರಹರಿ, ಚಾಟುವಿಠಲ ಮುಂತಾದ ಮಧ್ಯಕಾಲೀನ ಕವಿಗಳೂ ಸಂಸ್ಕೃತದ ಋಣಕ್ಕೆ ತಲೆಬಾಗಿದ್ದಾರೆ. ಅವರು ಕನ್ನಡವನ್ನು ಶ್ರೀಮಂತಗೊಳಿಸಲು ಸಂಸ್ಕೃತವನ್ನು ಆಶ್ರಯಿಸಿದರು. ಸಂಸ್ಕೃತದ ಸಂಪತ್ತು ಕನ್ನಡದ ಸಂಪತ್ತಾಗಿ

ಬೆಳೆಯಿತು. ಭಾಷೆ, ಶೈಲಿ, ಅಲಂಕಾರ, ಛಂದಸ್ಸು ಮುಂತಾದವುಗಳನ್ನು ಸಂಸ್ಕೃತದಿಂದ ಕಡತಂದು ಕನ್ನಡದ ನೆಲದಲ್ಲಿ ಬಿತ್ತಿದರು. ಕರ್ನಾಟಕದ ಕವಿಗಳು ಉಭಯಕವಿ ಪದ್ಧತಿಯನ್ನು ಬೆಳೆಸಿದರು. ರಾಘವಾಂಕ–ಷಡಕ್ಷರಿ ಇಬ್ಬರು ಕವಿಗಳು ಉಭಯಭಾಷೆಗಳಲ್ಲೂ ಕಾವ್ಯರಚನೆ ಮಾಡಿದರು. ಸಂಸ್ಕೃತವು ಕನ್ನಡಕ್ಕೆ ಪೂರಕವೂ ಪೋಷಕವೂ ಆಗಿ ಒಂದೂವರೆ ಸಾವಿರ ವರ್ಷಗಳಿಂದ ಬೆಳೆದುಕೊಂಡು ಬಂದಿದೆ. ನಾವು ಈ ತತ್ತ್ವವನ್ನು, ಈ ಅಂಶವನ್ನು ಚೆನ್ನಾಗಿ ತಿಳಿದರೆ ಭಾರತದ ಜ್ಞಾನಭಾಷೆ, ಕಾವ್ಯಭಾಷೆ ಮತ್ತು ಸಂವಹನ ಭಾಷೆಯಾಗಿದ್ದ ಸಂಸ್ಕೃತವು ಕನ್ನಡಕ್ಕೆ ತೇಜಸ್ಸನ್ನೂ ಧೈರ್ಯವನ್ನೂ ಭಾವಪುಷ್ಟಿಯನ್ನೂ ಒದಗಿಸಿತು.

**ಸಾಂಸ್ಕೃತಿಕ ಸಂಬಂಧ:**

ಕನ್ನಡದ ನೆಲದಲ್ಲಿ ಸಾವಿರಾರು ಶಾಸನಗಳು ಕಂಡುಬರುತ್ತವೆ. ಗಂಗ, ಕದಂಬ ಮತ್ತು ರಾಷ್ಟ್ರಕೂಟರ ಕಾಲದಲ್ಲಿ ನೂರಾರು ಸಂಸ್ಕೃತ ಶಾಸನಗಳು ಕಂಡುಬರುತ್ತವೆ. ಅವು ಕಲ್ಲಿನ ಮೇಲೆ, ತಾಮ್ರಪಟಗಳ ಮೇಲೆ ಕೆತ್ತಲ್ಪಟ್ಟಿವೆ. ರಾಜ್ಯದ ಅಧಿಕೃತ ಭಾಷೆಯಾಗಿ ಸಂಸ್ಕೃತ ಮತ್ತು ಕನ್ನಡ ಇವೆರಡೂ ಬಳಕೆಯಲ್ಲಿ ಇದ್ದುದನ್ನು ಇದು ತಿಳಿಸಿಕೊಡುತ್ತದೆ. ಅನೇಕ ಕನ್ನಡ ಶಾಸನಗಳಲ್ಲಿ ಸಂಸ್ಕೃತ ವಾಕ್ಯಗಳೂ ಶ್ಲೋಕಗಳೂ ಪುನಃ ಪುನಃ ಬಳಕೆಯಾಗಿವೆ. ಆಯಾ ಶಾಸನಗಳ ಕೊನೆಗೆ ಸಂಸ್ಕೃತದಲ್ಲಿ ಶಾಪಾಶಯಗಳು ಬಂದೇ ಬರುತ್ತವೆ. ಒಂದೂವರೆ ಶತಮಾನದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಸಂಸ್ಕೃತ ಶಾಸನಗಳು ನಮಗೆ ಸಿಗುತ್ತವೆ. ಅವುಗಳಲ್ಲಿ ಗಂಗ ವಂಶದ ದುರ್ವಿನೀತ ರಾಜನ ಕಾಲದ ಶಾಸನಗಳು, ಕದಂಬರ ಕಾಲದ ಸಂಸ್ಕೃತ ಶಾಸನಗಳು ಕಾವ್ಯದೃಷ್ಟಿಯಿಂದ 'ಉತ್ತಮ ಕಾವ್ಯ'ಗಳೇ ಆಗಿವೆ. ಕರ್ನಾಟಕ ಸಾಂಸ್ಕೃತಿಕ ಇತಿಹಾಸ ಬರೆಯುವವರು ಕನ್ನಡದಲ್ಲಿರುವ 'ಸಂಸ್ಕೃತ ಶಾಸನ'ಗಳನ್ನು ಬಿಟ್ಟು ಬರೆಯಲು ಸಾಧ್ಯವೇ ಇಲ್ಲ!

ಕನ್ನಡ ಮತ್ತು ಸಂಸ್ಕೃತಗಳೆರಡು ಸಮನ್ವಯಗುಣವನ್ನು ಎತ್ತಿಹೇಳುತ್ತವೆ. ಮತ, ಧರ್ಮ ಮತ್ತು ಆಚರಣೆಗಳಲ್ಲಿ ಸಮನ್ವಯಭಾವ ಎದ್ದುಕಾಣುತ್ತದೆ. 24.08.1368ರಲ್ಲಿ ವಿಜಯನಗರ ಕಾಲದಲ್ಲಿ ವೈಷ್ಣವರಿಗೂ ಜೈನರಿಗೂ ವಿರಸ ಬಂದಾಗ ಇಬ್ಬರಲ್ಲೂ ಸಮತೆಯನ್ನು ಉಂಟುಮಾಡಿದ್ದನ್ನು ಶ್ರವಣಬೆಳ್ಗೊಳದ ಶಾಸನದಲ್ಲಿ ನಾವು ಕಾಣುತ್ತೇವೆ. ಬೇಲೂರಿನ ಶಾಸನವೊಂದು ಸಮನ್ವಯಗುಣವನ್ನು ಸಾರಿ ಹೇಳುತ್ತದೆ.

**ಯಂ ಶೈವಾಸ್ಸಮುಪಾಸತೇ ಶಿವ ಇತಿ, ಬ್ರಹ್ಮೇತಿ ವೇದಾಂತಿನೋ**
**ಬೌದ್ಧಾ ಬುದ್ಧ ಇತಿ, ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ।**
**ಅರ್ಹಂಶ್ಚೇತಿ ಹ ಜೈನಶಾಸನಮತಿಃ ಕರ್ಮೇತಿ ಮೀಮಾಂಸಕಾಃ**
**ಸೋಽಯಂ ವೋ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ ॥**

ಈ ಮೇಲಿನ ಅಂಶಗಳನ್ನು ಪರಿಶೀಲಿಸಿದರೆ ಕನ್ನಡ ಮತ್ತು ಸಂಸ್ಕೃತಗಳೆರಡು ತಾಯಿ–ಮಗಳ ಸಂಬಂಧವನ್ನು ಸದಾ ಹೊಂದಿಕೊಂಡಿರುವುದನ್ನು ನಾವು ಕಾಣುತ್ತೇವೆ.

**❖ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
**ಕುಲಪತಿಗಳು**



**राष्ट्रपतिप्रशस्तिं प्राप्तवतः सोमयाजिनः साम्बदीक्षितदामोदरोपाध्यायवर्यान् सगौरवम् अभिनन्दति कर्णाटकसंस्कृतविश्वविद्यालयः ।**



**महर्षिबादरायणव्याससम्मानप्रशस्तिं प्राप्तवतः डा. वीरनारायण एन्.के. पाण्डुरङ्गिवर्यान् सहार्दम् अभिनन्दति कर्णाटकसंस्कृतविश्वविद्यालयः ।**

# ವಾರ್ತಾ ವಿಭಾಗ

# "ಸಂಸ್ಕೃತಮ್-ಸಂಗಣಕಮ್" – ಕಾರ್ಯಾಗಾರ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕರ್ನಾಟಕದ ಸಂಸ್ಕೃತ ಕಾಲೇಜುಗಳಲ್ಲಿರುವ ಅಧ್ಯಾಪಕ ಮತ್ತು ವಿದ್ಯಾರ್ಥಿವೃಂದವು ಹೊಸ ಆವಿಷ್ಕಾರಗಳನ್ನುಪಯೋಗಿಸಿ ಹೊಸ ಪಾಠ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕೆಂಬ ಸದುದ್ದೇಶದಿಂದ ಪ್ರಾಧ್ಯಾಪಕರುಗಳಿಗಾಗಿ ಮೂರು ದಿನಗಳ 'ಸಂಗಣಕ–ಸಂಸ್ಕೃತಮ್' ಎನ್ನುವ ಕಾರ್ಯಾಗಾರವನ್ನು 17, 18, 19 ಆಗಸ್ಟ್ 2011ರಂದು ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಆಯೋಜಿಸಿತ್ತು.

ಈ ಕಾರ್ಯಾಗಾರಕ್ಕೆ ಎಲ್ಲ ಕಾಲೇಜುಗಳಿಂದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಕವರ್ಗ ಮತ್ತು ಅಪೇಕ್ಷೆಯುಳ್ಳ ಬೇರೆ ಅಭ್ಯರ್ಥಿಗಳು ಸೇರಿ ಒಟ್ಟು 42 ಶಿಕ್ಷಾರ್ಥಿಗಳು ಭಾಗವಹಿಸಿದ್ದರು.

17.08.2011ರ ಬೆಳಿಗ್ಗೆ ಉದ್ಘಾಟನಾಸಮಾರಂಭದಲ್ಲಿ ಉದ್ಘಾಟಕರಾಗಿ ಕುಲಪತಿಗಳು, ಮುಖ್ಯಾತಿಥಿಗಳಾಗಿ ವಿಜಯ ಕಾಲೇಜಿನ ಗಣಕವಿಭಾಗದ ಅಧ್ಯಕ್ಷರಾದ ಡಾ|| ಕೆ. ಶೇಷಮೂರ್ತಿಯವರು, ಸಭಾಧ್ಯಕ್ಷರಾಗಿ ಪ್ರೊ|| ಎ. ಹರಿದಾಸ ಭಟ್, ವಿದ್ಯಾಪೀಠದ ಪ್ರಾಚಾರ್ಯರು ಉಪಸ್ಥಿತರಿದ್ದರು.

ವೇದಘೋಷದೊಂದಿಗೆ ಸಮಾರಂಭವು ಆರಂಭವಾಯಿತು. ಕುಲಪತಿಗಳು ಮಾತನಾಡಿ, ಇಂತಹ ಕಾರ್ಯಾಗಾರಕ್ಕೆ ಸಕಲ ಸೌಲಭ್ಯಗಳನ್ನು ನೀಡುವುದಾಗಿ ಹೇಳಿದರಲ್ಲದೇ S.H.M.T. Projectನಂತೆ ಸಂಸ್ಕೃತ–ಕನ್ನಡದ ವಿಷಯದಲ್ಲೂ ಇಂತಹ ಕಾರ್ಯವನ್ನು ಮಾಡುವುದಕ್ಕೆ ಗಮನಹರಿಸಬೇಕು ಎಂದು ಅಭಿಪ್ರಾಯಪಟ್ಟರು.

ಪೂರ್ಣಪ್ರಜ್ಞ ವಿದ್ಯಾಪೀಠದ ಪ್ರಾಚಾರ್ಯರಾದ ಪ್ರೊ|| ಎ. ಹರಿದಾಸ ಭಟ್‌ರವರು "ಪೂರ್ಣಪ್ರಜ್ಞ ವಿದ್ಯಾಪೀಠದ ಕುಲಪತಿಗಳಾದ ಪರಮಪೂಜ್ಯ ಶ್ರೀಪಾದರು ಕಂಪ್ಯೂಟರ್ ಸಂಬಂಧಿತ ಕಾರ್ಯಗಳಿಗೆ ಮಹತ್ವವನ್ನು ಕೊಟ್ಟಿದ್ದಾರೆಂದು" ಮನವರಿಕೆ ಮಾಡಿಕೊಟ್ಟರು.

ಮುಖ್ಯಾತಿಥಿಗಳಾಗಿ ಮಾತನಾಡಿದ ಡಾ|| ಕೆ. ಶೇಷಮೂರ್ತಿಯವರು ಸಂಸ್ಕೃತ ಎಂದರೇನು? ಸಂಸ್ಕೃತ ಭಾಷೆಯ ಮಹತ್ವವೇನು? ಈ ಭಾಷೆಯಿಂದಾಗುವ ಪ್ರಯೋಜನಗಳಾವುವು? ಸಂಸ್ಕೃತ ಹಾಗು ಕಂಪ್ಯೂಟರ್‌ಗೆ ಇರುವ ಸಂಬಂಧವೇನು? ಸಂಸ್ಕೃತದ ಮೇಲೆ ಆಗುತ್ತಿರುವ ಸಂಶೋಧನೆಗಳಾವುವು? ಎನ್ನುವುದರ ಮಾಹಿತಿಯನ್ನು ವಿವರಿಸಿದರು.



ಕಾರ್ಯಾಗಾರದಲ್ಲಿ ಉದ್ಬೋಧಿಸುತ್ತಿರುವ ಕುಲಪತಿಗಳು ಮತ್ತು ಇತರ ಗಣ್ಯರು

ಶಿಬಿರದ ಮೊದಲ ಮಾತಾಗಿ (Key Note Address) ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಶ್ರೀನಿವಾಸ ವರಖೇಡಿಯವರು ಸಂಸ್ಕೃತದ ವಿದ್ವಾಂಸರ ಕರ್ತವ್ಯವೇನು? ಎನ್ನುವುದನ್ನು ತಿಳಿಹೇಳಿದರು. ಮುಖ್ಯವಾಗಿ "ಸಂಸ್ಕೃತದಲ್ಲಿ ಏನಿಲ್ಲ? ಎಲ್ಲವೂ ಇದೆ. ಹಾಗೆಯೇ ಸಂಸ್ಕೃತವು ಒಂದು ವಿಜ್ಞಾನ. ಗಣಿತ ಹಾಗು ವಿಜ್ಞಾನ ವಿಭಾಗಗಳಂತೆ ಸಂಸ್ಕೃತವೂ ಕೂಡ ಕಲಾ (Arts) ವಿಭಾಗದಿಂದ ವಿಜ್ಞಾನ (Science) ವಿಭಾಗಕ್ಕೆ ಹೋಗಬೇಕು. ಅದಕ್ಕಾಗಿ ಎಲ್ಲರೂ ತಮ್ಮ ತನು, ಮನವನ್ನು ಕೇಂದ್ರೀಕರಿಸಬೇಕೆಂದು ಪ್ರೋತ್ಸಾಹಕರ ಮಾತನ್ನಾಡಿದರು.

19.08.2011ರ ಸಾಯಂಕಾಲ 03.30ಕ್ಕೆ ಜರುಗಿದ ಸಮಾರೋಪ ಸಮಾರಂಭದ ದಿವ್ಯಸಾನ್ನಿಧ್ಯವನ್ನು ಪಲಿಮಾರುಮಠದ ಪರಮಪೂಜ್ಯ ಶ್ರೀ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು ವಹಿಸಿದ್ದರು. ಅಧ್ಯಕ್ಷತೆಯನ್ನು ಕುಲಪತಿಗಳು ವಹಿಸಿದ್ದರು. ಮುಖ್ಯಾತಿಥಿಗಳಾಗಿ ಪ್ರೊ. ಪ್ರಹ್ಲಾದಾಚಾರ್ಯರು, ಡಾ. ಅಂಬಾ ಕುಲಕರ್ಣಿ ಹಾಗೂ ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನದ

ಕಾರ್ಯದರ್ಶಿಗಳಾದ ವಿದ್ವಾನ್ ಯು. ಕೇಶವ ಭಟ್ ಭಾಗವಹಿಸಿದ್ದರು. ಡಾ. ತಿರುಮಲ ಕುಲಕರ್ಣಿಯವರು ಕಾರ್ಯಕ್ರಮದ ನಿರ್ವಹಣೆ ಮಾಡಿದರು.

ಮುಖ್ಯಾತಿಥಿಗಳಾಗಿ ಭಾಷಣ ಮಾಡಿದ ಡಾ. ಅಂಬಾ ಕುಲಕರ್ಣಿಯವರು ಭಾಷಾಕ್ಷೇತ್ರದಲ್ಲಿ ಭಾಷೆ ಹಾಗೂ ತಾಂತ್ರಿಕಪರಿಣತಿ ಹೊಂದಿದ ವಿದ್ವಾಂಸರ ಕೊರತೆಯಿದ್ದು, ಅದನ್ನು ನಿವಾರಿಸಲು ಆಯಾಯಾ ಭಾಷಾವಿದ್ವಾಂಸರೇ ತಾಂತ್ರಿಕಪರಿಣತಿಯನ್ನು ಪಡೆದರೆ ಭಾಷಾಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಲು ಸಾಧ್ಯ ಎಂದು ತಿಳಿಸಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಮಾಡುತ್ತಿರುವ ಪ್ರಯತ್ನ ಶ್ಲಾಘನೀಯ ಎಂದರು.

ಪ್ರೊ. ಪ್ರಹ್ಲಾದಾಚಾರ್ಯರು ಮಾತನಾಡಿ ದಕ್ಷಿಣಭಾರತದ ಭಾಷೆಗಳಿಗೆ ಭಾಷಾಂತರ ತಂತ್ರಜ್ಞಾನದ ಅವಶ್ಯಕತೆಯಿದ್ದು, ಅದರ ಬಗ್ಗೆಯೂ ಕೂಡ ವಿಶ್ವವಿದ್ಯಾಲಯವು ಗಮನಹರಿಸಬೇಕೆಂದು ಸಲಹೆಯಿತ್ತರು.

ಮಾನ್ಯ ಕುಲಪತಿಗಳು ಅಧ್ಯಕ್ಷಭಾಷಣವನ್ನು ಮಾಡುತ್ತಾ ಪ್ರೊ. ಪ್ರಹ್ಲಾದಾಚಾರ್ಯರ ಸಲಹೆಯನ್ನು ಸ್ವೀಕರಿಸುತ್ತಾ ಅಂತಹ ಯಾವುದೇ ಕೆಲಸಗಳಿಗೆ ವಿಶ್ವವಿದ್ಯಾಲಯವು ಪ್ರೋತ್ಸಾಹವನ್ನು ಕೊಡುತ್ತದೆ ಮತ್ತು ತಾವೇ ಮುಂದೆ ನಿಂತು ಮಾರ್ಗದರ್ಶನ ಮಾಡಬೇಕೆಂದು ಕೇಳಿಕೊಂಡರು.

ಪರಮಪೂಜ್ಯ ಶ್ರೀಪಾದಂಗಳವರ ಆಶೀರ್ವಚನ ಮತ್ತು ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಕಾರ್ಯಾಗಾರದಲ್ಲಿ ಇಬ್ಬರಿಗೆ ಒಂದರಂತೆ ಕಂಪ್ಯೂಟರನ್ನು ವ್ಯವಸ್ಥೆಗೊಳಿಸಲಾಗಿತ್ತು. ಪ್ರತಿದಿನ ಬೆಳಿಗ್ಗೆ ಹಾಗೂ ಮಧ್ಯಾಹ್ನ ಒಟ್ಟು ಆರು ಗಂಟೆ ಕಾಲ ಕಾರ್ಯಕ್ರಮಗಳು ನಡೆದವು. ದೇಶದ ವಿವಿಧೆಡೆಗಳಿಂದ ಬಂದಿದ್ದ ಪರಿಣತ ವಿದ್ವಾಂಸರು ಉಪನ್ಯಾಸಗಳನ್ನು ನಡೆಸಿಕೊಟ್ಟರು.

ಕಾರ್ಯಾಗಾರದಲ್ಲಿ ಮಾರ್ಗದರ್ಶಕರು ಹೇಳಿದ್ದನ್ನು, ಮಾಡಿ ತೋರಿಸಿದ್ದನ್ನು ಅಭ್ಯರ್ಥಿಗಳು ತಮ್ಮೆದುರಿನ ಕಂಪ್ಯೂಟರಿನಲ್ಲಿ ಮಾಡಿ ನೋಡುತ್ತಿದ್ದರು. ಇ-ಗ್ರಂಥಾಲಯದಲ್ಲಿ ರಾಮಾಯಣ-ಭಾರತಾದಿಗಳಲ್ಲಿ ನಮಗೆ ಬೇಕಾದ್ದನ್ನು ಹುಡುಕುವುದು ಹೇಗೆ ಎಂದು ತಿಳಿದರು. ಸಂಧಿ-ಸಮಾಸ-ಕಾರಕಗಳ ಬಗ್ಗೆ ಸಿದ್ಧವಾಗಿರುವ ವಿವಿಧ ಸಾಫ್ಟ್‌ವೇರುಗಳ ಪರಿಚಯ ಮಾಡಿಕೊಂಡರು. ಸಂಸ್ಕೃತ ಕಂಪ್ಯೂಟರಿಗೆ ಹೇಗೆ ಹತ್ತಿರ ಎಂದು ತಿಳಿದರು. ಅಂತರ್ಜಾಲದಲ್ಲಿ ನಡೆಯುತ್ತಿರುವ ವಿವಿಧ ಉಪಕ್ರಮಗಳಾದ 'ಸಂಸ್ಕೃತ ವಿಕಿಪೀಡಿಯಾ, ಭಾರತೀಯ ವಿದ್ವತ್ ಪರಿಷತ್, ವ್ಯೋಮಸಂಸ್ಕೃತಪಾಠಶಾಲಾ' ಇವೇ ಮುಂತಾದವುಗಳ ಬಗ್ಗೆ ಮಾಹಿತಿ ಪಡೆದರು. 'ಅಷ್ಟಾಧ್ಯಾಯಿಯು ಉನ್ನತಮಟ್ಟದ ಪ್ರೋಗ್ರಾಂ ಆಗಿದೆ' ಎಂಬುದನ್ನು ಉದಾಹರಣೆಯೊಂದಿಗೆ ಮನದಟ್ಟು ಮಾಡಿಕೊಂಡರು.

'ಸಾಗರದಲ್ಲಿ ಅಪಾರ ಜಲವಿದ್ದರೂ ಬಾಯಾರಿದವರಿಗೆ ಒಂದು ಹನಿ ನೀರು ಸಿಗದು. ಅದರಂತೆ ಜಗತ್ತಿನಲ್ಲಿ ಐಟಿ ಕ್ಷೇತ್ರ ಎಷ್ಟೇ ವಿಸ್ತಾರವಾಗಿದ್ದರೂ ಸಂಸ್ಕೃತದವರಿಗೆ ತಮ್ಮ ಅಧ್ಯಯನ-ಅಧ್ಯಾಪನ-ಸಂಶೋಧನದಂತಹ ಕೆಲಸಗಳಿಗೆ ಕಂಪ್ಯೂಟರ್ ಹೇಗೆ ಉಪಯುಕ್ತ ಎಂಬ ಮಾಹಿತಿ ನೀಡುವವರು ವಿರಳ. ಆ ಕೆಲಸ ಈ ಕಾರ್ಯಾಗಾರದಲ್ಲಿ ಆಯಿತು.' ಎಂಬ ಅಭಿಪ್ರಾಯ ಮೂಡಿಬಂತು.

●

# ಭಾರತೀಯ ಸಂಸ್ಕೃತಿ ವಿದ್ಯಾಪೀಠದಲ್ಲಿ 'ಮಧ್ಯಮ ವ್ಯಾಯೋಗ'

ದಿನಾಂಕ 20.08.2011ರಂದು ಶನಿವಾರ ಪೂರ್ವಾಹ್ನ 11.30ಕ್ಕೆ ಸರಿಯಾಗಿ ಬೆಂಗಳೂರಿನ ಚಾಮರಾಜಪೇಟೆಯ ಭಾರತೀಯ ಸಂಸ್ಕೃತಿ ವಿದ್ಯಾಪೀಠದಲ್ಲಿ ಸಂಸ್ಕೃತೋತ್ಸವವು ವಿಜೃಂಭಣೆಯಿಂದ ನಡೆಯಿತು. ಇದರ ಅಧ್ಯಕ್ಷರಾಗಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಪುಟ್ಟಮ್ಮ ಹತ್ವಾರ್ ಅವರು ಹಾಗೂ ಮುಖ್ಯ ಅತಿಥಿಗಳಾಗಿ ಭಾರತೀಯ ಸಂಸ್ಕೃತಿ ವಿದ್ಯಾಪೀಠ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀಮಾನ್ ಹನುಮಂತೇಗೌಡರು ಆಗಮಿಸಿದ್ದರು. ಆಡಳಿತಾಧಿಕಾರಿಗಳಾದ ಶ್ರೀಮತಿ ಉಷಾ ಆಚಾರ್ಯ, ಶ್ರೀಮತಿ ಇಂದಿರಮ್ಮ ಮತ್ತು ಹೆಚ್.ಟಿ. ಜಯಶ್ರೀ ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳು ಮತ್ತು ಅಧ್ಯಕ್ಷರು ವಿದ್ಯಾರ್ಥಿಗಳನ್ನುದ್ದೇಶಿಸಿ ಸಂಸ್ಕೃತ ಭಾಷೆಯ ಬಗ್ಗೆ ತಿಳಿಸುತ್ತ ಅದನ್ನು ಕಲಿಯುವಂತೆ ಉತ್ತೇಜನ ನೀಡಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸಂಸ್ಕೃತ ಗೀತಗಾಯನ, ಅಮರಕೋಶ ಪಠನ, ಚಿತ್ರಶ್ಲೋಕ ಕಥನ ಹಾಗೂ ಭಾಸ ಮಹಾಕವಿಯ 'ಮಧ್ಯಮ ವ್ಯಾಯೋಗ' ಎಂಬ ನಾಟಕವನ್ನು ಅಭಿನಯಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

❑

# ಸ್ವರ್ಣವಲ್ಲಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ



ಸಂಸ್ಕೃತೋತ್ಸವ ಕಾರ್ಯಕ್ರಮದ ದೃಶ್ಯ

ಶಿರಸಿಯ ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಶ್ರೀ ರಾಜರಾಜೇಶ್ವರೀ ವಿದ್ಯಾಸಂಸ್ಥೆಯ ಆಶ್ರಯದಲ್ಲಿ 'ಸಂಸ್ಕೃತ ದಿನಾಚರಣೆ' ನಡೆಯಿತು. ಶ್ರಾವಣ ಮಾಸದ ಶುಭ ಗಳಿಗೆಯಲ್ಲಿ ಸಂಸ್ಕೃತ ಸಾಹಿತ್ಯದ ಪ್ರಸಾರಾಂಗವಾಗಿ ಆಯೋಜಿಸಿದ ಈ ಕಾರ್ಯಕ್ರಮಕ್ಕೆ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರು ದಿವ್ಯ ಸಾನ್ನಿಧ್ಯವಿತ್ತು ಆಶೀರ್ವಚನವಿತ್ತರು. ಆಗಸ್ಟ್ 16ರಂದು ಸಂಸ್ಕೃತ ಭಾಷೆಯಲ್ಲಿ 'ಪ್ರಹ್ಲಾದ ಚರಿತೆ' ಹರಿಕೀರ್ತನೆ ನಡೆಯಿತು. ಶ್ರೀ ರಾ.ರಾ. ಮಹಾಪಾಠಶಾಲೆಯ ಪ್ರಾಧ್ಯಾಪಕರಾದ ವಿದ್ವಾನ್ ಶಂಕರ ಭಟ್ಟ ಉಂಚಳ್ಳಿ ಇವರು ನೈತಿಕ ವಿಷಯಗಳನ್ನು ಮತ್ತು ಭಕ್ತಿರಸಾಯನವನ್ನು ಹರಿಕಥಾ ಕಾಲಕ್ಷೇಪದ ಮೂಲಕ ಸಾರಿದರು. ಇವರಿಗೆ ಆನಂದ ಭಟ್ಟ (ತಬಲಾ) ಹಾಗೂ ಮಹೇಶ ಭಟ್ಟ (ಹಾರ್ಮೋನಿಯಂ) ಸಾಥ್ ನೀಡಿದರು. ವಿದ್ವಾನ್ ಶಂಕರ ಭಟ್ಟ ಬಾಲೀಗದ್ದೆ ನಿರ್ವಹಿಸಿದರು.

ಆಗಸ್ಟ್ 18ರಂದು ತ್ರಿವೇದಿಗಳೂ ವಿದ್ವಾಂಸರೂ ಆದ ಶಿವಮೊಗ್ಗದ ಶ್ರೀ ಲಕ್ಷ್ಮೀನಾರಾಯಣ ಭಟ್ಟ ಹಂದಲಸು ಇವರು ಉಪನ್ಯಾಸವಿತ್ತು ವೇದ-ಶಾಸ್ತ್ರಗಳ ಮಹತ್ವ, ಪ್ರಯೋಜನ ಹಾಗೂ ಅಧ್ಯಯನಕ್ರಮಗಳ ಕುರಿತು ತಿಳಿಸಿಕೊಟ್ಟರು. ಕಾರ್ಯಕ್ರಮವನ್ನು ವಿದ್ವಾನ್ ವಿನಾಯಕ ಭಟ್ಟ ಗುಂಜಗೋಡ ನಡೆಸಿಕೊಟ್ಟರು.

ಆಗಸ್ಟ್ 22ರಂದು ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರು ಉಪನ್ಯಾಸವಿತ್ತು, ಪ್ರಾಣಾಯಾಮ ಮತ್ತು ಪಂಚಪ್ರಾಣಗಳ ಬಗ್ಗೆ ವಿವರಿಸಿದರು.

ಆಗಸ್ಟ್ 28ರಂದು ಶಿರಸಿಯ ಪ್ರಸಿದ್ಧ ಆಯುರ್ವೇದ ವೈದ್ಯರಾದ ಶ್ರೀ ಸಾಂಬಮೂರ್ತಿ ಗಾಯತ್ರಿಯವರು ಓರ್ವ ವ್ಯಕ್ತಿ ದೀರ್ಘಾಯುವೂ, ಸುಖವಾಗಿಯೂ, ಆರೋಗ್ಯವಂತನೂ ಆಗಿ ಬದುಕುವುದಕ್ಕೆ ಬೇಕಾಗುವ ದಿನಚರಿ ಹಾಗೂ ಆಹಾರನಿಯಮಗಳನ್ನು ತಿಳಿಸಿಕೊಟ್ಟರು. ಕಾರ್ಯಕ್ರಮವನ್ನು ವಿದ್ವಾನ್ ಶಂಕರಭಟ್ಟ ಉಂಚಳ್ಳಿ ನಿರ್ವಹಿಸಿದರು.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಪ್ರಾಂಶುಪಾಲರಾದ ವಿದ್ವಾನ್ ನರಸಿಂಹ ಭಟ್ಟ ತಾರೀಮಕ್ಕಿ ಹಾಗೂ ಸಹಾಧ್ಯಾಪಕರು ಉಪಸ್ಥಿತರಿದ್ದರು. ಅಲ್ಲದೇ ವಿದ್ಯಾರ್ಥಿಗಳು, ಅನೇಕ ಜನ ಮಹನೀಯರು ಮತ್ತು ಮಾತೆಯರು ಉಪಸ್ಥಿತರಿದ್ದರು.



**ಪ್ರೊ. ಎಚ್.ವಿ. ನಾಗರಾಜರಾವ್ ಅವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಥಮ ಗೌರವ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕಗೊಂಡಿದ್ದಾರೆ. ಇವರಿಗೆ ವಾರ್ತಾಪತ್ರವು ಅಭಿನಂದಿಸುತ್ತದೆ.**

**– ಸಂ.**

# ‘ಸಂಸ್ಕೃತ ವಿಶ್ವಮಾನ್ಯತೆ ಪಡೆದ ಭಾಷೆ’

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿರುವ ಅನುದಾನಿತ ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಮಹಾವಿದ್ಯಾಲಯದ ಆಶ್ರಯದಲ್ಲಿ 2011–12ನೇ ಸಾಲಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ ಶ್ರೀಕ್ಷೇತ್ರದ ಬಿ.ಜಿ.ಎಸ್. ಸಭಾಭವನದಲ್ಲಿ ನಡೆಯಿತು. ಶ್ರೀಕ್ಷೇತ್ರಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಪದ್ಮಭೂಷಣ ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಕಾರ್ಯಕ್ರಮವನ್ನು ಉದ್ಘಾಟಿಸಿ ‘ಸಂಸ್ಕೃತ ವಿಶ್ವಮಾನ್ಯತೆ ಪಡೆದ ಭಾಷೆ. ಈ ಭಾಷೆಯನ್ನು ಕಲಿತವರಿಗೆ ವಿಶ್ವದೆಲ್ಲೆಡೆ ಗೌರವವಿದೆ. ಇಂತಹ ಸಂಸ್ಕೃತ ವೇದಾಗಮ ಶಿಕ್ಷಣವನ್ನು ಶ್ರೀಕ್ಷೇತ್ರದಲ್ಲಿ ಯಾವುದೇ ಜಾತಿಮತ ಭೇದವಿಲ್ಲದೆ 5000 ಮಂದಿ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡಲಾಗುತ್ತಿದೆ. ಇಲ್ಲಿ ತಯಾರಾದ ವಿದ್ವಾಂಸರುಗಳು ದೇಶ ವಿದೇಶಗಳಲ್ಲಿ ಕೀರ್ತಿಭಾಜನರಾಗಿದ್ದಾರೆಂದರಲ್ಲದೇ ಎಲ್ಲರು ಶ್ರೀಕ್ಷೇತ್ರದಲ್ಲಿರುವ ಅವಕಾಶವನ್ನು ಪಡೆದುಕೊಳ್ಳಬೇಕು’ ಎಂದು ನುಡಿದರು.

ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರು ‘ಸಂಸ್ಕೃತಿಯಲ್ಲಿ ನಡೆ ನುಡಿ ಮುಖ್ಯವಾಗುತ್ತದೆ. ಇದು ಶುದ್ಧವಾಗಿದ್ದರೆ ನಾಡು ಸಮೃದ್ಧವಾಗುತ್ತದೆ. ಈ ಸಂಸ್ಕಾರವಿಲ್ಲವಾದರೆ ನಾಡು ನಾಡಾಗಿ ಉಳಿಯದು. ಇದಕ್ಕೆ ಸಂಸ್ಕೃತ ಭಾಷೆ ಕಾರಣ. ಸಂಸ್ಕೃತ ಭಾಷೆಯ ಬೆಳವಣಿಗೆಗೆ ಶ್ರೀಮಠ ಹಾಗೂ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮಿಗಳವರು ನೀಡುತ್ತಿರುವ ಪ್ರೋತ್ಸಾಹ ಶ್ಲಾಘನೀಯವಾದುದು. ಸಂಸ್ಕೃತ



ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಮಕ್ಕಳು ಮತ್ತು ಗಣ್ಯರು

ವಿಶ್ವವಿದ್ಯಾಲಯದ ಎಲ್ಲಾ ಚಟುವಟಿಕೆಗಳು ಪೂಜ್ಯ ಶ್ರೀಗಳವರ ಮಾರ್ಗದರ್ಶನದಲ್ಲಿ ನಡೆಯುತ್ತಿದೆ. ವಿದ್ಯೆಯಿಂದ ಬರುವ ಕೀರ್ತಿ ಎಲ್ಲಕ್ಕಿಂತ ದೊಡ್ಡದು. ಇಂತಹ ಕೀರ್ತಿ ಬರುವ ವಿದ್ಯೆಯನ್ನು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಎಲ್ಲಾ ವರ್ಗದ ಮಕ್ಕಳಿಗೆ ನೀಡುತ್ತಿದೆ. ಶ್ರೀಕ್ಷೇತ್ರ ನಡೆಸುತ್ತಿರುವ ಸಂಸ್ಕೃತ ವೇದಾಗಮ ಮಹಾವಿದ್ಯಾಲಯದಲ್ಲಿ ತಯಾರಾದ ವಿದ್ಯಾರ್ಥಿಗಳು ನಾಡಿನೆಲ್ಲೆಡೆ ಇದ್ದಾರೆ’ ಎಂದು ನುಡಿದರು.

ಶಾಸಕರಾದ ಶ್ರೀ ಕೆ. ಸುರೇಶ್ ಗೌಡರವರು ಅಧ್ಯಕ್ಷತೆ ವಹಿಸಿ ಮಾತನಾಡಿ ‘ಸಂಸ್ಕೃತದಿಂದ ಸಂಸ್ಕೃತಿ ಎಂಬುದು ನಿಜ. ಶ್ರೀಮಠದಲ್ಲಿ ಸಂಸ್ಕೃತ ಕಲಿತ ನೀವೆಲ್ಲರೂ ಸುಸಂಸ್ಕೃತರಾಗಿ ಬಾಳಿದಲ್ಲಿ ಜಗತ್ತು ಅಭಿವೃದ್ಧಿಯಾಗುತ್ತದೆ’ ಎಂದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಪ್ರೊ. ಎನ್. ಅಶ್ವತ್ಥಮ್ಮರವರು ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಕಾರ್ಯನಿರ್ವಹಣಾಧಿಕಾರಿಗಳಾದ ಡಾ. ಎನ್.ಎಸ್. ರಾಮೇಗೌಡರವರು, ಆಡಳಿತಾಧಿಕಾರಿಗಳಾದ ಶ್ರೀ ಸಿ.ಟಿ. ಶಿವೇಗೌಡರವರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಕಾರ್ಯದರ್ಶಿಗಳಾದ ಪೂಜ್ಯ ಶ್ರೀ ನಿರ್ಮಲಾನಂದನಾಥ ಸ್ವಾಮಿಗಳವರು ಹಾಗೂ ಶಾಖಾಮಠಗಳ ಪೂಜ್ಯ ಸ್ವಾಮೀಜಿಗಳವರು ಉಪಸ್ಥಿತರಿದ್ದರು. ಪ್ರಾಚಾರ್ಯರಾದ ಪ್ರೊ. ಸಿ. ನಂಜುಂಡಯ್ಯರವರು ಪ್ರಾಸ್ತಾವಿಕ ಭಾಷಣ ಮಾಡಿ ಸಂಸ್ಕೃತ ವೇದಾಗಮ ಕಾಲೇಜಿನ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿದರು. ಕಳೆದ ಸಾಲಿನಲ್ಲಿ ನಡೆದ ಸಂಸ್ಕೃತ ವೇದಾಗಮ ಪ್ರಸಿದ್ಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ 30 ಮಂದಿ ಅಭ್ಯರ್ಥಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಹಾಗೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೂ ಬಹುಮಾನ ವಿತರಿಸಲಾಯಿತು. ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಮಂಡ್ಯದ ಸ್ಟಾರ್ ಸಿಂಗರ್ಸ್ ತಂಡದವರು ಸುಗಮ ಸಂಗೀತ ನಡೆಸಿಕೊಟ್ಟರು.

ಪ್ರೊ. ಕೆ.ಜಿ. ಕೂರ್ಸೆ ಸ್ವಾಗತ ಭಾಷಣ ಮಾಡಿದರು. ವಿದ್ವಾನ್ ಮಧುಸೂದನ ಅಡಿಗ ವಂದನಾರ್ಪಣೆ ಮಾಡಿದರು. ಪ್ರೊ. ಹೆಚ್.ಎಂ. ನರಸಿಂಹಮೂರ್ತಿ ಸ್ಪರ್ಧಾವಿಜೇತ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರಕಟಿಸಿದರು. ವಿದ್ವಾನ್ ಶ್ರೀಕಾಂತ ಪುರೋಹಿತ್ ಕಾರ್ಯಕ್ರಮ ನಿರೂಪಿಸಿದರು.

# ಕೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ – ಸಂಸ್ಕೃತೋತ್ಸವ ಆಚರಣೆ



ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು

ಮೈಸೂರಿನ ಜೆ.ಎಸ್.ಎಸ್. ಮಹಾವಿದ್ಯಾಪೀಠದ ಆಶ್ರಯದಲ್ಲಿರುವ ಕೆ.ಎಸ್.ಎಸ್. ಸಂಸ್ಕೃತ ಪಾಠಶಾಲೆಯಲ್ಲಿ ದಿನಾಂಕ 26.08.2011ರ ಶುಕ್ರವಾರ ಸಂಜೆ 'ಸಂಸ್ಕೃತೋತ್ಸವ'ವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜೆ.ಎಸ್.ಎಸ್. ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಕೆ. ಶಾಂತಯ್ಯನವರು 'ಸಂಸ್ಕೃತ ಫಲಕಗಳ (ಚಿತ್ರಪಟ) ಪ್ರದರ್ಶನವನ್ನು ಉದ್ಘಾಟಿಸಿ, ಅಧ್ಯಕ್ಷ ಭಾಷಣವನ್ನು ಮಾಡುತ್ತಾ ಸಂಸ್ಕೃತ ಫಲಕಗಳ ಪ್ರದರ್ಶನದಿಂದ ವಿದ್ಯಾರ್ಥಿಗಳ ಓದಿಗೆ ಮತ್ತು ಹೆಚ್ಚಿನ ಜ್ಞಾನಾರ್ಜನೆಗೆ ಸಹಾಯಕವಾಗುತ್ತದೆಂದು ತಿಳಿಸಿದರು. ಫಲಕಗಳ ಪ್ರದರ್ಶನ ಅತ್ಯುತ್ತಮವಾಗಿತ್ತೆಂದು ಪ್ರಶಂಸಿಸಿ ಸಂಸ್ಕೃತವನ್ನು ನಿರರ್ಗಳವಾಗಿ ಮಾತನಾಡುವಂಥ ಆತ್ಮಸ್ಥೈರ್ಯ ಮಕ್ಕಳಲ್ಲಿ ಮೂಡಬೇಕು ಎಂದು ತಿಳಿಸಿದರು.

ಜೆ.ಎಸ್.ಎಸ್. ಮಹಾವಿದ್ಯಾಪೀಠದ ಉಪನಿರ್ದೇಶಕರಾದ ಶ್ರೀ ಎಚ್.ವಿ. ಶೇಷಗಿರಿರಾವ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಮಕ್ಕಳಿಂದ ರಚಿಸಲ್ಪಟ್ಟ ಫಲಕಗಳನ್ನು ಪ್ರಶಂಸಿಸಿ ಎಲ್ಲ ಭಾಷೆಗಳಿಗೆ ಮೂಲ ಭಾಷೆಯಾದ ಸಂಸ್ಕೃತವನ್ನು ವಿದ್ಯಾರ್ಥಿಗಳ ಶ್ರದ್ಧೆಯಿಂದ ಕಲಿಯಬೇಕು ಎಂದರು.

ಮೈಸೂರಿನ ಸರ್ಕಾರಿ ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯ ತರ್ಕಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ವಿದ್ವಾನ್ ಶ್ರೀ ಗಂಗಾಧರ ಭಟ್‌ರವರು ಸಂಸ್ಕೃತ ಅಧ್ಯಯನದಿಂದ ಸ್ಪಷ್ಟ ಉಚ್ಚಾರಣೆ ಮತ್ತು ಸ್ಫುಟವಾದ ಜ್ಞಾನ ಉಂಟಾಗುತ್ತದೆ. ಶ್ರಾವಣ ಮಾಸದಲ್ಲಿ ಕಲಿಕೆ ಪ್ರಾರಂಭ ಮಾಡಿದರೆ ಕಲಿಕೆಯ ಶ್ರೇಯೋಭಿವೃದ್ಧಿಯಾಗುತ್ತದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಹಾರಾಜ ಸಂಸ್ಕೃತ ಪಾಠಶಾಲೆಯ ನಿವೃತ್ತ ಪ್ರಾಧ್ಯಾಪಕರಾದ ವಿದ್ವಾನ್ ಎಂ. ಮಲ್ಲಣ್ಣನವರು ಮಾತನಾಡುತ್ತ ಈ ಸಂಸ್ಕೃತ ದಿನೋತ್ಸವ ಆಚರಿಸುವುದರಿಂದ ವಿದ್ಯಾರ್ಥಿಗಳಲ್ಲಿ ಸಂಸ್ಕೃತದ ಬಗ್ಗೆ ಅಭಿಮಾನ, ತಿಳಿವು ಹೆಚ್ಚಿಸಲು ಪ್ರೋತ್ಸಾಹದಾಯಕವಾಗಿರುತ್ತದೆ. ಮಕ್ಕಳಿಂದ ರಚಿಸಲ್ಪಟ್ಟ ಚಿತ್ರಪಟಗಳ ಬಗ್ಗೆ ಮಾತನಾಡುತ್ತಾ ಮಕ್ಕಳು ಮಾಡುವ ತಪ್ಪು ತಿದ್ದಲು ಇಂತಹ ಕಾರ್ಯಕ್ರಮ ಅರ್ಥಪೂರ್ಣವಾಗಿರುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಂಸ್ಕೃತ ಭಾರತಿಯ ಕಾರ್ಯಕರ್ತರಾದ ಶ್ರೀ ಶ್ರುತಿಪ್ರಿಯ ಅವರು ಮಾತನಾಡಿ, 'ಸಂಸ್ಕೃತ ಒಂದು ಕಾಲದಲ್ಲಿ ಆಡುಭಾಷೆಯಾಗಿತ್ತು. ದೇವನಾಗರಿಲಿಪಿಯಾದ ಸಂಸ್ಕೃತವನ್ನು ಎಲ್ಲ ವಿದ್ಯಾರ್ಥಿಗಳು ಮಾತನಾಡಲು ಪ್ರಯತ್ನಿಸಬೇಕು' ಎಂದು ತಿಳಿಸಿದರು.

ಪಾಠಶಾಲೆಯ ಮುಖ್ಯೋಪಾಧ್ಯಾಯಿನಿಯಾದ ಶ್ರೀ ಸುನಂದಾ ಭೂಪಾಳಿ ಇವರು ಸ್ವಾಗತ ಭಾಷಣ ಮಾಡಿದರು. ಕೆ. ಮಲ್ಲಿಕಾರ್ಜುನ ವಂದನಾರ್ಪಣೆ ಮಾಡಿದರು. ಚೇತನ್ ಎಸ್.ಎಂ. ಕಾರ್ಯನಿರೂಪಣೆ ಮಾಡಿದರು. ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ಸಂಸ್ಕೃತೋತ್ಸವ ಮುಕ್ತಾಯವಾಯಿತು.

**ವಾಚಕರಲ್ಲಿ ಮನವಿ**

**ವಾರ್ತಾಪತ್ರಕ್ಕೆ ವರದಿಯನ್ನು ಕಳುಹಿಸಿಕೊಡುವವರು ಭಾವಚಿತ್ರದಲ್ಲಿರುವವರ ಹೆಸರನ್ನು ಅದರ ಹಿಂಭಾಗದಲ್ಲಿ ಸ್ಪಷ್ಟವಾಗಿ ನಮೂದಿಸುವುದರ ಮೂಲಕ ವಾರ್ತಾಪತ್ರಕ್ಕೆ ಸಹಕಾರ ನೀಡಬೇಕಾಗಿ ವಿನಂತಿ. – ಸಂ.**

# ಪರಕೀಯ ಸಂಸ್ಕೃತಿಯಿಂದ ಭಾರತೀಯ ಸಂಸ್ಕೃತಿಯ ನಾಶ

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಗುಳೇದಗುಡ್ಡದ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಸಂಸ್ಕೃತ ಪಾಠಶಾಲೆಯಲ್ಲಿ ದಿನಾಂಕ 15.08.2011ರಂದು ಸಂಜೆ 5.00 ಗಂಟೆಗೆ ಸಂಸ್ಕೃತ ದಿನೋತ್ಸವವನ್ನು ಆಚರಿಸಲಾಯಿತು.

ನಿವೃತ್ತ ಉಪನ್ಯಾಸಕರಾದ ಮಾನ್ಯಶ್ರೀ ಕೆ.ಎಚ್. ಮರಳಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿ 'ಐದು ಸಾವಿರ ವರ್ಷದಿಂದ ನಮ್ಮ ದೇಶ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದೆ. ನಮ್ಮ ಸಂಸ್ಕೃತಿ ಉತ್ತಮವಾದದ್ದು, ಪರಕೀಯ ಸಂಸ್ಕೃತಿಯಿಂದ ಭಾರತೀಯ ಸಂಪ್ರದಾಯ, ಆಚರಣೆಗಳು ಸದ್ಯ ನಶಿಸುತ್ತಿವೆ' ಎಂದು ವಿಷಾದ ವ್ಯಕ್ತಪಡಿಸಿದರು. ಸಂಸ್ಕೃತದಿಂದ ಸಂಸ್ಕೃತಿ ಉಳಿಯುತ್ತದೆ. ಇಂಗ್ಲೀಷ್ ಭಾಷೆಯು ಅವೈಜ್ಞಾನಿಕವಾದದ್ದು, ಇಂಗ್ಲೀಷ್ ಭಾಷೆಯ ಲಿಪಿ ಬೇರೆ, ಉಚ್ಚಾರಣೆ ಬೇರೆಯಾಗಿದೆ. ಇಂಗ್ಲೀಷ್ ಭಾಷೆಯು ಸ್ವತಂತ್ರ ಭಾಷೆಯೂ ಅಲ್ಲ. ಅದರ ಮೂಲ ಲ್ಯಾಟಿನ್ ಆಗಿದೆ. ಸಂಸ್ಕೃತ ಭಾಷೆ ಶ್ರೀಮಂತ ಭಾಷೆಯಾಗಿದೆ. ಕಾರಣ ಭಾಷೆಯ ಬೆಳವಣಿಗೆಗೆ ಸಹಕಾರ ಮುಖ್ಯ ಎಂದು ಉದ್ಘಾಟನಾ ಭಾಷಣ ಮಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಹಿಳಾ ಬಿ.ಇಡಿ. ಕಾಲೇಜಿನ ಪ್ರಾಚಾರ್ಯರಾದ ಶ್ರೀ ಪಿ.ವೈ. ಸಂಗಮದ ಇವರು ಸಂಸ್ಕೃತ ಅತ್ಯಂತ ಪುರಾತನ ಭಾಷೆಯಾಗಿದೆ. ಈ ಭಾಷೆಗೆ ತನ್ನದೇ ಆದ ಮಹತ್ವವಿದ್ದು ಕಲಿಕೆ ಕೂಡ ಸುಲಭವಾಗಿದೆ ಎಂದು ಹೇಳಿದರು.

ಇನ್ನೊಬ್ಬ ಅತಿಥಿಗಳಾದ ಶ್ರೀ ಜ.ಗು. ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ಡಿ.ಬಿ. ಗಾಜಿಯವರು ಪ್ರತಿಯೊಬ್ಬರೂ ಮಾತನಾಡುವ ಭಾಷೆಯಲ್ಲಿ ಅನೇಕ ಸಂಸ್ಕೃತ ಶಬ್ದಗಳ ಬಳಕೆಯಾಗುತ್ತದೆ ಎಂದು ಹೇಳಿದರು.

ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಿ.ಐ. ಯಂಡಿಗೇರಿಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶ್ರೀ ಶಾರದಾ ಸಂಸ್ಕೃತ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ನಾಗವೇಣಿ ವಿ. ತಿಪ್ಪಾ, ಸಹಶಿಕ್ಷಕರಾದ ಶ್ರೀ ಸೋಮಶೇಖರ ಸಿ. ಬಂಕಾಪೂರ, ಶ್ರೀಮತಿ ಸುನಂದಾ ರಾಸನಕರ ಮತ್ತು ಕು. ಲಕ್ಷ್ಮಿ ಕಟಗೇರಿ ಹಾಜರಿದ್ದರು. ಸಹಶಿಕ್ಷಕಿಯರಾದ ಶ್ರೀಮತಿ ಗೀತಾ ವೈ. ಬಂಕಾಪೂರ ಸ್ವಾಗತಿಸಿದರು. ಶ್ರೀಮತಿ ಮಾಲಾ ತಾಂಡೂರ ನಿರೂಪಿಸಿದರು. ಶ್ರೀ ಮಲ್ಲಿಕಾರ್ಜುನ ರಾಜನಾಳ ವಂದಿಸಿದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

# ಸಂಸ್ಕೃತ ಕಲಿಕೆಯಿಂದ ಉತ್ತಮ ಸಂಸ್ಕಾರ

ಭಗವದ್ಗೀತೆ ಹಿಂದೂಗಳ ಪವಿತ್ರ ಗ್ರಂಥ. ಇದರ ಆಳ ಅರಿತಾಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದು ಮುಖ್ಯೋಪಾಧ್ಯಾಯ ಎ.ವೈ. ರಾಜಾಪೂರ ಹೇಳಿದರು.

ಹುನಗುಂದ ತಾಲೂಕಿನ ಕಮತಗಿ ಗ್ರಾಮದಲ್ಲಿ ಶ್ರೀ ನಂಜುಂಡೇಶ್ವರ ಸಂಸ್ಕೃತ ಪಾಠಶಾಲೆ, ಶ್ರಾವಣ ಮಾಸದ ನಿಮಿತ್ತ ಹಮ್ಮಿಕೊಂಡ ಸಂಸ್ಕೃತೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಂಸ್ಕೃತ ಪ್ರಾಚೀನ, ದೇವಭಾಷೆ. ಇದರ ಕಲಿಕೆ ಎಲ್ಲರಿಗೂ ಅಗತ್ಯ. ಮಕ್ಕಳು ಸೇರಿದಂತೆ ಸಂಸ್ಕೃತ ಕಲಿಕೆ ಎಲ್ಲರಿಗೂ ಅಗತ್ಯ. ಈ ಭಾಷೆಯ ಸುಭಾಷಿತಗಳು ನೀತಿಯನ್ನು ಹೇಳಿಕೊಡುತ್ತವೆ. ಇದು ಎಲ್ಲ ಭಾಷೆಗಳ ತಾಯಿಯಾಗಿದ್ದರಿಂದ ಎಲ್ಲರ ಬೆಳವಣಿಗೆಗೆ ಸಹಕಾರಿಯಾಗಿದೆ. ಸಂಸ್ಕೃತಕ್ಕೆ ಸರ್ಕಾರದ ಸಹಕಾರ ಅಗತ್ಯ ಎಂದು ಅಭಿಪ್ರಾಯಪಟ್ಟರು.



ಸಂಸ್ಕೃತ ಪಾಠಶಾಲೆಯ ಮುಖ್ಯೋಪಾಧ್ಯಾಯ ಜಿ.ಆರ್. ಹುನಗುಂದ ಸ್ವಾಗತಿಸಿದರು. ಶಿಕ್ಷಕ ಪ್ರಕಾಶ ಅಚನೂರ ನಿರೂಪಿಸಿ, ವಂದಿಸಿದರು. ಮಕ್ಕಳಿಗಾಗಿ ನಾನಾ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.

# ಕಸ್ತೂರಿಬಾ ಹೆಣ್ಣುಮಕ್ಕಳ ವಸತಿಶಾಲೆಯಲ್ಲಿ 'ಸಂಸ್ಕೃತ ಸಂಗಮ'

ಕಸ್ತೂರಿಬಾ ಹೆಣ್ಣುಮಕ್ಕಳ ವಸತಿ ಶಾಲೆಯಲ್ಲಿ ದಿನಾಂಕ: 27.08.2011ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಸಂಸ್ಕೃತ ಸಂಗಮವೆನ್ನುವಂತೆ ಸಂಸ್ಕೃತಮಯ ವಾತಾವರಣವೇ ಆಗಿತ್ತು. ಸಂಸ್ಕೃತ ಶಿಕ್ಷಕರ ವಾಗ್ಝರಿ ಹಾಗೂ ವಿದ್ಯಾರ್ಥಿಗಳ ಸಂಸ್ಕೃತ ನೃತ್ಯಗೀತೆ ಹಾಗೂ ಭಗವದ್ಗೀತಾ ವಾಚನ, ಅನುಭವ ವಾಣಿಗಳು ಸಂಸ್ಕೃತ ಲೋಕಕ್ಕೆ ಕರೆದೊಯ್ದಂತಿತ್ತು.

ಲಕ್ಷ್ಮೇಶ್ವರದ ಶ್ರೀಮತಿ ಲಲಿತಾ ಕೆರಮನಿ ಇವರು 'ಸಂಸ್ಕೃತ ಸರಳ, ದಿವ್ಯ, ಅಮರಭಾಷೆ, ಸಂಸ್ಕೃತ ಭಾಷಾ ಕಲಿಕೆಯಿಂದ ಅನ್ಯಭಾಷಾ ಜ್ಞಾನವಾಗುತ್ತದೆ ಹಾಗೂ ಸುಸಂಸ್ಕೃತಿ ಬೆಳೆಯುತ್ತದೆ' ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎಸ್.ಎಸ್. ಚುಂಚಾ, 'ಶ್ರೀ ಗಜಾನನ ಸಂಸ್ಕೃತ ಕಾಲೇಜು 80 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದೆ. ಪಂ. ಶ್ರೀರಾಮ ಶಾಸ್ತ್ರಿಗಳಿಂದ ಸ್ಥಾಪಿಸಿ ಅನೇಕ ವಿದ್ಯಾರ್ಥಿಗಳಿಗೆ ಅಧ್ಯಾಪನ ಮಾಡಿ ಸೂಡಿ ಸಂಸ್ಕೃತ ಪಾಠಶಾಲೆಯನ್ನು ಮರದಂತೆ ಬೆಳೆಸಿದ್ದಾರೆ. ಅವರ ಪುತ್ರರೂ ಪ್ರಸ್ತುತ ಪ್ರಾಂಶುಪಾಲರೂ ಆದ ಶ್ರೀ ಜಿ.ಆರ್. ಜೋಶಿ ಇವರು 30 ವರ್ಷಗಳ ಕಾಲ ಸೇವೆ ಸಲ್ಲಿಸುತ್ತಾ 4 ಶಿಕ್ಷಕರೊಂದಿಗೆ ಉತ್ತಮ ಸಾಧನೆ ಮಾಡಿದ್ದಾರೆ' ಎಂದು ಪ್ರಶಂಸಿಸಿದರು. ಅಧ್ಯಕ್ಷತೆ ವಹಿಸಿದ ಶ್ರೀ ಜಿ.ಆರ್. ಜೋಶಿ 'ಎಲ್ಲರ ಸಹಾಯ ಸಹಕಾರದಿಂದ ನಡೆದಿದೆ. ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಆಸಕ್ತಿಯೂ ಉತ್ತಮವಿದೆ. ಇನ್ನೂ ಹೆಚ್ಚಿನ ಸಾಧನೆ ಮಾಡುವ ಹಂಬಲವಿದೆ' ಎಂದು ಉತ್ಸಾಹ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ 2010–11ನೇ ಸಾಲಿನಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರ ವಿತರಿಸಲಾಯಿತು ಹಾಗೂ ಶ್ರೀಮತಿ ಲಲಿತಾ ಸಿ. ಕೆರಮನಿ ಇವರಿಂದ ನೀಡಿದ ಠೇವಣಿ ಧನದ ಪ್ರತಿಫಲವನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು. ಶ್ರೀ ಎಸ್.ಎನ್. ಕುಲಕರ್ಣಿ ಸ್ವಾಗತಿಸಿದರು. ಶ್ರೀಮತಿ ಎಸ್.ಎಸ್. ಬಾಸಗಿ ಸಾಂಸ್ಕೃತಿಕ ಕಾರ್ಯ ನಿರೂಪಿಸಿದರು. ಶ್ರೀ ಎಸ್.ಬಿ. ಆರೇರ ಅವರು ವಂದಿಸಿದರು. ಶ್ರೀ ಬಿ.ವಿ. ಜೋಶಿ ಕಾರ್ಯಕ್ರಮ ನಿರೂಪಣೆ ಮಾಡಿದರು.

# ಗುರುಸಿದ್ಧೇಶ್ವರ ಸಂಸ್ಕೃತ ಪಾಠಶಾಲೆ: 'ರಕ್ಷಾ ಬಂಧನ' ಆಚರಣೆ



ಮುಖ್ಯ ಶಿಕ್ಷಕರಾದ ಶ್ರೀ ಬಿ.ಐ. ಯಂಡಿಗೇರಿ, ಶ್ರೀಮತಿ ಜಿ.ವೈ. ಬಂಕಾಪೂರ, ಮಾಲಾ ಎಸ್. ತಾಂಡೂರ, ಲಕ್ಷ್ಮಿ ಎಸ್. ಕಟಗೇರಿ ಹಾಗೂ ವಿದ್ಯಾರ್ಥಿಗಳು

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಗುಳೇದಗುಡ್ಡದ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಸಂಸ್ಕೃತ ಪಾಠಶಾಲೆಯಲ್ಲಿ ದಿನಾಂಕ 13.08.2011 ಶನಿವಾರ ರಕ್ಷಾಬಂಧನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಶಿಕ್ಷಕರಾದ ಶ್ರೀ ಬಿ.ಐ. ಯಂಡಿಗೇರಿ, ಸಹ ಶಿಕ್ಷಕರಾದ ಶ್ರೀಮತಿ ಜಿ.ವೈ. ಬಂಕಾಪೂರ ಇವರ ಉಪಸ್ಥಿತಿಯಲ್ಲಿ ಜರುಗಿತು. ಮಕ್ಕಳಿಂದ ಕರ್ನಾಟಕ ಮಾತೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು ಮತ್ತು ವಿದ್ಯಾರ್ಥಿನಿಯರು ಪ್ರಾರ್ಥನಾ ಗೀತೆ ಹಾಡಿ, ಸಹೋದರ ವಿದ್ಯಾರ್ಥಿಗಳಿಗೆ ರಾಖಿಯನ್ನು ಕಟ್ಟಿದರು. ರಕ್ಷಾಬಂಧನ ಕುರಿತು ಶ್ರೀಮತಿ ಎಂ.ಎಸ್. ತಾಂಡೂರ ಮಾತನಾಡಿದರು. ಕುಮಾರಿ ಲಕ್ಷ್ಮೀ ಎಸ್. ಕಟಗೇರಿ, ಮಲ್ಲಿಕಾರ್ಜುನ ರಾಜನಾಳ ಉಪಸ್ಥಿತರಿದ್ದರು.

# ಪುನಶ್ಚೇತನ ಶಿಬಿರ: ಮೈಸೂರು



ಮೈಸೂರಿನಲ್ಲಿ ನಡೆದ ಪುನಶ್ಚೇತನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಗಣ್ಯರು.

ಮೈಸೂರಿನ ದತ್ತಪೀಠದಲ್ಲಿ 27.06.2011ರಂದು ಬೆಳಿಗ್ಗೆ 9.00 ಗಂಟೆಗೆ ವೈದ್ಯಕೀಯ ಶಿಕ್ಷಣ ಸಚಿವರಾದ ಶ್ರೀ ಎಸ್.ಎ. ರಾಮದಾಸ್‌ರವರು ದೀಪ ಬೆಳಗಿ ಸಂಸ್ಕೃತ ಪಾಠಶಾಲಾ ಶಿಕ್ಷಕರ ಮೂರು ದಿನದ ಪುನಶ್ಚೇತನ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಾ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಜಗತ್ತಿನಾದ್ಯಂತ ಸಂಸ್ಕೃತವನ್ನು ಪಸರಿಸುವಂತೆ ಪ್ರಯತ್ನಿಸಲಿ ಎಂದು ಕರೆಕೊಟ್ಟರು. ಅಧ್ಯಕ್ಷ ಭಾಷಣದಲ್ಲಿ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರು 'ವಿಶ್ವವಿದ್ಯಾಲಯ'ವು ಸಂಸ್ಕೃತದ ಪದವೀಪೂರ್ವ ಶಿಕ್ಷಣಕ್ಕಾಗಿ ಸಂಸ್ಕೃತ ಭಾಷಾ ನಿರ್ದೇಶನಾಲಯವನ್ನು ಸ್ಥಾಪಿಸಿದೆ. ವ್ಯಾಪಕವಾದ ಹಾಗೂ ಪಾಂಡಿತ್ಯಪೂರ್ಣ ಸಂಸ್ಕೃತ ಅಧ್ಯಯನ ನಡೆಯಬೇಕೆಂಬುದು ನಿರ್ದೇಶನಾಲಯದ ಉದ್ದೇಶ. ಈ ದೃಷ್ಟಿಯಿಂದ ನಾಲ್ಕೂ ವಿಭಾಗಗಳಲ್ಲಿ ಪುನಶ್ಚೇತನ ಶಿಬಿರವನ್ನು ಯೋಜಿಸಲಾಗಿದೆ. ನೂತನ ಹಾಗೂ ಪುರಾತನ ಅಧ್ಯಯನ ಕ್ರಮವನ್ನು ಸಮನ್ವಯಗೊಳಿಸಿ ಶಿಕ್ಷಕರು ಸಮರ್ಥವಾಗಿ ಬೋಧನ ಕರ್ತವ್ಯವನ್ನು ಶ್ರದ್ಧೆಯಿಂದ ನಿರ್ವಹಿಸಬೇಕೆಂದು ಕರೆಯಿತ್ತರು. ಪ್ರಶಾಸನ ಸಮಿತಿಯ ಸದಸ್ಯರಾದ ಪ್ರೊ. ಎನ್. ಅಶ್ವತ್ಥಮ್ಮರವರು ಸಂಸ್ಕೃತ ಶಿಕ್ಷಣವು ಎಲ್ಲರಿಗೂ ಸುಲಭವಾಗಿ ದೊರೆಯಬೇಕೆಂಬ ಆಶಯವನ್ನು ವ್ಯಕ್ತಪಡಿಸಿದರು. ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀ ಶ್ರೀ ಶ್ರೀದತ್ತವಿಜಯಾನಂದತೀರ್ಥ ಸ್ವಾಮಿಗಳು 'ಆಶ್ರಮವು ತಮ್ಮ ತವರುಮನೆ ಎಂದು ಭಾವಿಸಿ ಪುನಶ್ಚೇತನ ಶಿಬಿರದ ಸಂಪೂರ್ಣ ಫಲವನ್ನು ಪಡೆಯುವಂತೆ' ಹೇಳಿದರು. ಸಂಸ್ಕೃತವನ್ನು ಪಾರಂಪರಿಕವಾಗಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಯನ್ನು ಏರ್ಪಡಿಸಿ ವಿಭಿನ್ನ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ವಿಶ್ವವಿದ್ಯಾಲಯವು ಮುಕ್ತಾವಕಾಶವನ್ನು ಕಲ್ಪಿಸಬೇಕೆಂದು ಕುಲಪತಿಗಳಿಗೆ ಸೂಚಿಸಿದರು. ಶ್ರೀ ಎಂ. ಶಿವಮೂರ್ತಿ ಪ್ರಾಸ್ತಾವಿಕ ನುಡಿಯನ್ನು ಮುಂದಿಟ್ಟರು. ಶ್ರೀಮತಿ ಸುಧಾರವರು ವಂದನೆಯನ್ನು ಅರ್ಪಿಸಿದರು. ಐಕ್ಯಮಂತ್ರದೊಂದಿಗೆ ಕಾರ್ಯಕ್ರಮ ಸಂಪೂರ್ಣಗೊಂಡಿತು. ಶಿಬಿರ ಸಂಯೋಜಕರಾದ ಶ್ರೀ ಗಂಗಾಧರ ವಿ. ಭಟ್ಟರವರು ಕಾರ್ಯಕ್ರಮವನ್ನು ನಿರೂಪಿಸಿದರು.

29.06.11ರಂದು ಈ ಶಿಬಿರದ ಸಮಾಪನ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮವನ್ನು ಶ್ರೀ ಶ್ರೀ ಶ್ರೀ ದತ್ತವಿಜಯಾನಂದ ತೀರ್ಥಸ್ವಾಮಿಗಳ ಸನ್ನಿಧಿಯಲ್ಲಿ ಏರ್ಪಡಿಸಲಾಗಿತ್ತು. ಮೈಸೂರು ವತಿಯಿಂದ ಮೈಸೂರು ಜಿಲ್ಲೆ ಹಾಗೂ ಚಾಮರಾಜ ಜಿಲ್ಲೆಯ ಪದವೀಪೂರ್ವ ಹಂತದ 36 ಸಂಸ್ಕೃತ ಪಾಠಶಾಲೆಗಳ 70 ಶಿಕ್ಷಕರಿಗೆ ತರಬೇತಿ ನೀಡಲಾಗಿತ್ತು. ಸಮಾರೋಪ ಭಾಷಣ ಮಾಡಿದ ರಾಷ್ಟ್ರಪತಿ ಪುರಸ್ಕೃತ ವಿದ್ವಾಂಸರಾದ ಪ್ರೊ. ಎಚ್.ವಿ. ನಾಗರಾಜರವರು ತರಬೇತಿಯಲ್ಲಿ ಪಡೆದ ನಿಪುಣತೆಯನ್ನು ತರಗತಿಯಲ್ಲಿ ಬಳಸಿ ವಿದ್ಯಾರ್ಥಿಗಳನ್ನು ಸೆಳೆಯಲು ಕರೆಯಿತ್ತರು. ಅಧ್ಯಕ್ಷತೆ ವಹಿಸಿದ್ದ ನಿರ್ದೇಶಕರಾದ ಡಾ. ಶ್ರೀನಿವಾಸ ವರಖೇಡಿಯವರು ಸ್ವಾಧ್ಯಾಯ ನಿರತರಾಗಲು ಸಲಹೆ ನೀಡಿ ಪ್ರತಿದಿನ ರಾಮಾಯಣದ ಒಂದು ಶ್ಲೋಕವನ್ನಾದರೂ ಪಠಿಸಲು ಶಿಕ್ಷಕರಿಗೆ ಸೂಚಿಸಿದರು. ತರಬೇತಿ ಪಡೆದ ಶಿಕ್ಷಕರ ಪರವಾಗಿ ವಿದ್ವಾನ್ ಮಲ್ಲಣ್ಣ ಮತ್ತು ಶ್ರೀಮತಿ ಸಾವಿತ್ರೀ ಪೂಜಾರಿ ಸಂಪನ್ಮೂಲ ವ್ಯಕ್ತಿಗಳ ಸರಳತೆ ಹಾಗೂ ವಿಷಯತಜ್ಞತೆ ನಮಗೆ ದಾರಿದೀಪವೆಂದು ಹೇಳಿದರು. ಸಂಸ್ಕೃತ ಸಂಭಾಷಣೆ ನಮಗೆ ನವಚೈತನ್ಯ ನೀಡಿದೆ ಎಂದು ದನಿಗೂಡಿಸಿದರು. ಅನುಗ್ರಹ ಭಾಷಣ ಮಾಡಿದ ಪರಮಪೂಜ್ಯ ಸ್ವಾಮೀಜಿಗಳು ಇತರ ವೃತ್ತಿಗಳಂತೆ ಶಿಕ್ಷಕ ವೃತ್ತಿಗೆ ತರಬೇತಿ ನಿರಂತರ ನಡೆಯಬೇಕಾದ ಪ್ರಕ್ರಿಯೆ. ದತ್ತಪೀಠವು ಇಂಥ ತರಬೇತಿಗಾಗಿ ಸಕಲ ಸಹಾಯ ನೀಡಲು ಸಿದ್ಧ ಎಂದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಹತ್ತು ಸಾವಿರ ರೂಪಾಯಿಗಳ ದೇಣಿಗೆ ನೀಡಿ ಅಭ್ಯಾಗತರಾಗಿ ಆಗಮಿಸಿದ ಸಹಾಯಕ ನಿರ್ದೇಶಕ ವಿದ್ವಾನ್ ಗಂಗಣ್ಣನವರಲ್ಲಿ ಸದುಪಯೋಗಪಡಿಸುವ ವ್ಯವಸ್ಥೆ ಮಾಡಲು ಕೋರಿದರು. ಸಹ ಸಂಚಾಲಕ ವಿದ್ವಾನ್ ಎಂ. ಶಿವಮೂರ್ತಿ ವರದಿ ಮಂಡಿಸಿದರು. ಸಂಚಾಲಕ ಗಂಗಾಧರ್ ವಿ. ಭಟ್ ನಿರೂಪಿಸಿದರು.

# ಮಕ್ಕಳಲ್ಲಿ ಸಂಸ್ಕೃತಿ ಬೆಳೆಸಿ: ಹುಚ್ಚೇಶ್ವರ ಶ್ರೀ



**ಕೋಟೆಕಲ್ ಗ್ರಾಮದ ಶಾರದಾ ವಿದ್ಯಾಲಯದಿಂದ ಹುಚ್ಚೇಶ್ವರ ಮಠದಲ್ಲಿ ಹಮ್ಮಿಕೊಂಡ ಸಂಸ್ಕೃತ ದಿನೋತ್ಸವ ಕಾರ್ಯಕ್ರಮವನ್ನು ಹೊಳೆಹುಚ್ಚೇಶ್ವರ ಶ್ರೀಗಳು ಉದ್ಘಾಟಿಸಿದರು.**

ಸಂಸ್ಕೃತಿ, ಸಂಸ್ಕಾರ, ಜ್ಞಾನಸಂಪತ್ತು ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುತ್ತದೆ ಎಂದು ಕೋಟೆಕಲ್ ಹೊಳೆ ಹುಚ್ಚೇಶ್ವರ ಮಠದ ಹುಚ್ಚೇಶ್ವರ ಶ್ರೀಗಳು ಹೇಳಿದರು.

ಬಾಗಲಕೋಟೆ ಜಿಲ್ಲೆ, ಬಾದಾಮಿ ತಾಲ್ಲೂಕಿನ ಕೋಟೆಕಲ್ ಗ್ರಾಮದ ಶಾರದಾ ವಿದ್ಯಾಲಯ ಹುಚ್ಚೇಶ್ವರ ಮಠದಲ್ಲಿ ಹಮ್ಮಿಕೊಂಡ ಸಂಸ್ಕೃತ ದಿನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಉತ್ತಮ ಚಾರಿತ್ರ್ಯ, ನಡವಳಿಕೆ ಬೆಳೆಸಿಕೊಂಡು ವಿದ್ಯಾರ್ಥಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು ಎಂದು ನಿವೃತ್ತ ಉಪನ್ಯಾಸಕ ಎಸ್.ಐ. ರಾಜನಾಳ ಹೇಳಿದರು.

ಜಿ.ಪಂ. ಮಾಜಿ ಉಪಾಧ್ಯಕ್ಷ ಹನುಮಂತ ಮಾವಿನಮರದ, ಸಿ.ವಿ. ತಿಪ್ಪಾ ಮತ್ತು ಫಕೀರೇಶ್ವರ ಶಾಸ್ತ್ರಿಗಳು ಮಾತನಾಡಿದರು.

ಇದೇ ಸಂದರ್ಭದಲ್ಲಿ ಸಂಸ್ಕೃತ ಸುಭಾಷಿತ, ಭಗವದ್ಗೀತಾ ಕಂಠಪಾಠ, ಕೋಲಾಟ, ಕವಾಲಿ, ದೇಶಭಕ್ತಿ ಗೀತೆಗಳ ಮನರಂಜನಾ ಕಾರ್ಯಕ್ರಮ ನಡೆಯಿತು. ನಾನಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

# ಶ್ರೀ ಶಂಕರ ಭಾರತಿ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತೋತ್ಸವ




**ಸಂಸ್ಕೃತೋತ್ಸವ ಕಾರ್ಯಕ್ರಮದಲ್ಲಿ ಡಾ. ಶ್ರೀನಿವಾಸ ವರಖೇಡಿ, ಶ್ರೀ ಚಂದ್ರಶೇಖರಯ್ಯ, ಶ್ರೀ ಟಿ.ಎಸ್. ನಾಗರಾಜರಾವ್, ಶ್ರೀ ರವಿಕುಮಾರ್, ಶ್ರೀಮತಿ ಸುಧಾ ಎಚ್.ಆರ್. ಮತ್ತು ಪ್ರಾರ್ಥನಾನಿರತ ವಿದ್ಯಾರ್ಥಿನಿಯರು.**

ಕೋಲಾರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಸೋಮೇನಹಳ್ಳಿಯ ಶ್ರೀ ಶಂಕರ ಭಾರತಿ ಸಂಸ್ಕೃತ ಪಾಠಶಾಲೆಯಲ್ಲಿ ದಿನಾಂಕ: 20.08.2011ರಂದು ಜಿಲ್ಲಾಮಟ್ಟದ ಸಂಸ್ಕೃತೋತ್ಸವವು ನಡೆಯಿತು. ಮಾನ್ಯ ನಿರ್ದೇಶಕರಾದ ಡಾ. ಶ್ರೀನಿವಾಸ ವರಖೇಡಿರವರಿಂದ ಕಾರ್ಯಕ್ರಮವು ಉದ್ಘಾಟಿಸಲ್ಪಟ್ಟಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಚಂದ್ರಶೇಖರಯ್ಯ, ಕರ್ನಾಟಕ ರಾಜ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು ವಹಿಸಿದ್ದರು. ಕಾರ್ಯಕ್ರಮದಲ್ಲಿ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಎಸ್. ನಾಗರಾಜರಾವ್, ಗುಡಿಬಂಡೆ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ರವಿಕುಮಾರ್ ಮತ್ತು ಸೋಮೇನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಸುಧಾ ಎಚ್.ಆರ್. ಹಾಗೂ ಜಿಲ್ಲೆಯ ಎಲ್ಲ ಸಂಸ್ಕೃತ ಪಾಠಶಾಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿಕೊಟ್ಟರು.

# ‘ಸಂಸ್ಕೃತ ಸಪ್ತಾಹ’ ಕಾರ್ಯಕ್ರಮ

ಕೇಂದ್ರ ಸರ್ಕಾರದ ಆದೇಶದಂತೆ ಶ್ರಾವಣ ಮಾಸದಲ್ಲಿ ನಡೆಸಬೇಕಾದ ಸಂಸ್ಕೃತ ಸಪ್ತಾಹ ಕಾರ್ಯಕ್ರಮವನ್ನು ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ ಸಂಸ್ಕೃತ ಪಾಠಶಾಲೆಯಲ್ಲಿ ಆಚರಿಸಲಾಯಿತು.



ಸಂಸ್ಕೃತ ಸಪ್ತಾಹ ಕಾರ್ಯಕ್ರಮದ ದೃಶ್ಯ

ಈ ಸಮಾರಂಭದ ಅಧ್ಯಕ್ಷತೆಯನ್ನು ಎನ್.ಎನ್. ಭಟ್, ಪ್ರಾಚಾರ್ಯರು ವಹಿಸಿದ್ದರು. ಸಂಸ್ಕೃತ ಅಧ್ಯಯನದ ಪ್ರಗತಿಯು ಹೆಚ್ಚಿನ ಮಟ್ಟದಲ್ಲಿ ಆಗಬೇಕಾಗಿದೆ. ವಿದ್ಯಾರ್ಥಿಗಳು ಆಸಕ್ತಿಯಿಂದ ಸಂಸ್ಕೃತ ಭಾಷಾ ಅಧ್ಯಯನವನ್ನು ಮಾಡಬೇಕು. ಈ ಭಾಷೆಯಲ್ಲಿ ನಮ್ಮ ಬದುಕಿಗೆ ಬೇಕಾದ ಅಪಾರ ಜ್ಞಾನಸಂಪತ್ತು ಅಡಗಿದೆ. ಈ ಭಾಷೆಯಲ್ಲಿರುವ ವಿವಿಧ ವಿಷಯಗಳನ್ನು ತೆಗೆದುಕೊಂಡು ಅದರ ಅಧ್ಯಯನವನ್ನು ಮಾಡಿ ಅದರ ಪ್ರಯೋಜನವನ್ನು ಎಲ್ಲ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು.

ಈ ಶ್ರಾವಣ ಮಾಸದಲ್ಲಿ ಎಲ್ಲೆಡೆಯಲ್ಲೂ ಕೂಡಾ ಈ ಸಂಸ್ಕೃತ ಕಾರ್ಯಕ್ರಮಗಳು ನಡೆಯುತ್ತಲಿವೆ. ಅದರಂತೆ ಈ ಪುಟ್ಟರಾಜ ಕವಿಗಳ ಪಾಠಶಾಲೆಯಲ್ಲಿ ಇಂತಹ ಕಾರ್ಯಕ್ರಮಗಳು ನಡೆಯುವುದು ಔಚಿತ್ಯಪೂರ್ಣವಾಗಿದೆ. ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಉತ್ಸಾಹದಿಂದ ವಿದ್ಯಾರ್ಥಿಗಳು ಭಾಗವಹಿಸಿರುವುದು ಸಂತೋಷಕರವಾಗಿದೆ ಎಂದರು. ಸಾನಿಧ್ಯವನ್ನು ವಹಿಸಿದ್ದ ಶ್ರೀ ಮಡಿವಾಳದೇವರು ಗದ್ದಗಿಮಠ, ಕಲಕೇರಿ ಇವರು ವಿದ್ಯಾರ್ಥಿಗಳು ಸಂಸ್ಕೃತದಲ್ಲಿ ಮಾತನಾಡಲು ಕಲಿಯಬೇಕು. ಸಾಹಿತ್ಯ ಜ್ಞಾನದೊಂದಿಗೆ ಭಾಷಾಜ್ಞಾನವನ್ನು ಚೆನ್ನಾಗಿ ಮಾಡಿಕೊಳ್ಳಬೇಕು ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಎಸ್.ಎನ್. ಸಿಂಪಗೇರಿ ಗುರುಗಳು ಇತರ ಭಾಷಾ ಪಂಡಿತರು ಕೂಡಾ ಸಂಸ್ಕೃತ ಭಾಷೆಯಿಂದಲೇ ಹೆಚ್ಚಿನ ಜ್ಞಾನವನ್ನು ಪಡೆದುಕೊಂಡಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳು ಸಂಸ್ಕೃತವನ್ನು ಓದುವುದರಿಂದ ಇತರ ಭಾಷೆಗಳನ್ನು ಚೆನ್ನಾಗಿ ಅಭ್ಯಾಸ ಮಾಡಬಹುದೆಂದರು. ಮುಖ್ಯಾಧ್ಯಾಪಕರಾದ ಪಂಚಯ್ಯ ಹಿರೇಮಠ ಅವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಇನ್ನೋರ್ವ ಶಿಕ್ಷಕರಾದ ಎಸ್.ಎಸ್. ಸಾಲಿಮಠ ವಂದಿಸಿದರು.

# ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತೋತ್ಸವ

ಅಧ್ಯಾಪಕರ ಸಂಘದ ವತಿಯಿಂದ ಕಾಲೇಜಿನ ಸಹಯೋಗದೊಂದಿಗೆ ದಿನಾಂಕ: 27.08.2011ರಂದು ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತೋತ್ಸವ ಕಾರ್ಯಕ್ರಮವನ್ನು ನಡೆಸಲಾಯಿತು. ವೇದಘೋಷದಿಂದ ಆರಂಭವಾದ ಈ ಕಾರ್ಯಕ್ರಮದಲ್ಲಿ ಸಂಘದ ಕಾರ್ಯದರ್ಶಿಗಳಾದ ವಿದ್ವಾನ್ ವೆಂಕಟರಮಣ ಹೆಗಡೆ ಉಪಸ್ಥಿತರಿಗೆ ಸ್ವಾಗತವನ್ನು ಕೋರಿದರು. ಸಂಘದ ಅಧ್ಯಕ್ಷರೂ, ಕಾಲೇಜಿನ ಪ್ರಾಂಶುಪಾಲರೂ ಆದ ಪ್ರೊ. ಭಾಷ್ಯಂಸ್ವಾಮಿಯವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ, ಸಂಸ್ಕೃತೋತ್ಸವದ ಅವಶ್ಯಕತೆ ಹಾಗೂ ಶ್ರಾವಣ ಮಾಸದಲ್ಲಿ ಸಂಸ್ಕೃತೋತ್ಸವದ ಆಚರಣೆಯ ಔಚಿತ್ಯ ಇತ್ಯಾದಿಗಳನ್ನು ಮನಮುಟ್ಟುವಂತೆ ವಿವರಿಸಿದರು. ಕಾರ್ಯಕ್ರಮದ ಸಭಾಧ್ಯಕ್ಷ ಸ್ಥಾನವನ್ನು ನವ್ಯನ್ಯಾಯ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ವಿದ್ವಾನ್ ಗಂಗಾಧರ ವಿ. ಭಟ್‌ರವರು ವಹಿಸಿದ್ದರು.

ವಿದ್ವಾನ್ ಗಂಗಾಧರ ವಿ. ಭಟ್‌ರವರು ಅಧ್ಯಕ್ಷ ಭಾಷಣ ಮಾಡುತ್ತಾ ಸಂಸ್ಕೃತೋತ್ಸವದ ಯಶಸ್ಸು ಸಂಸ್ಕೃತ ವಿದ್ಯಾರ್ಥಿಗಳನ್ನು ಅವಲಂಬಿಸಿದೆ ಎಂದು ಕಿವಿಮಾತು ಹೇಳಿದರು. ಕೊನೆಯಲ್ಲಿ ಸಂಘದ ಖಜಾಂಚಿಯವರಾದ ವಿದ್ವಾನ್ ಎನ್. ಸುಬ್ರಹ್ಮಣ್ಯ ಭಟ್ಟರವರು ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸರ್ವರನ್ನೂ ಅಭಿವಂದಿಸಿದರು.

# ಶ್ರೀ ಗಜಾನನ ಸಂಸ್ಕೃತ ಕಾಲೇಜಿನಲ್ಲಿ ಸ್ವಾತಂತ್ರ್ಯೋತ್ಸವ

ಶ್ರೀ ಗಜಾನನ ಸಂಸ್ಕೃತ ಮಹಾಪಾಠಶಾಲೆಯಲ್ಲಿ 65ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮಾನ್ ಬಾಬುಗೌಡ ಪಾಟೀಲ ವಹಿಸಿ ಧ್ವಜಾರೋಹಣವನ್ನು ಮಾಡಿ, ಸಂಸ್ಕೃತ ಭಾಷೆ ದೇವಭಾಷೆ, ಈ ಭಾಷಾ ಅಧ್ಯಯನ ಮಾಡುವುದರಿಂದ ದೇವತ್ವವು ಬರುವುದು ಎಂದು ಅಭಿಪ್ರಾಯ ಸೂಚಿಸಿದರು. ಅತಿಥಿಗಳಾಗಿ ಆಗಮಿಸಿದ ಅನೇಕ ಗಣ್ಯರು ಪಾಠಶಾಲೆಯ ಬಗ್ಗೆ ಗೌರವ ಸೂಚಿಸಿದರು. ಹಾಗೂ ವಿದ್ಯಾರ್ಥಿಗಳು ಸಂಸ್ಕೃತ ಭಾಷೆಯಲ್ಲಿ ಭಾಷಣ ಮಾಡಿ ದೇಶಪ್ರೇಮ ತೋರಿಸಿದರು. ಹಾಗೂ ಸಂಸ್ಕೃತ ಗೀತ, ನೃತ್ಯಗಳೊಂದಿಗೆ ಮನರಂಜನೆ ಮಾಡಿ ನೆರೆದ ಸಮೂಹವನ್ನು ಸಂತೋಷಪಡಿಸಿದರು.

ಶಾಲಾ ಪ್ರಾಚಾರ್ಯರಾದ ಶ್ರೀ ಜಿ.ಆರ್. ಜೋಶಿ ವಿದ್ಯಾರ್ಥಿಗಳಿಗೆ ಜ್ಞಾನದ ಮಹತ್ವ ಸೂಚಿಸುತ್ತಾ ತಂದೆ–ತಾಯಿ ಗುರುಗಳು ಮಕ್ಕಳನ್ನು ಶಿಕ್ಷಿಸಿದರೆ ಮಾತ್ರ ಉತ್ತಮ ಪ್ರಜೆಗಳಾಗುವುದು ಸಾಧ್ಯ ಎಂದು ತಿಳಿಸಿದರು.

ಶ್ರೀ ಎಸ್.ಬಿ. ಆರೇರ್ ವಂದಿಸಿದರು. ಶ್ರೀ ಎನ್.ಎಸ್. ಕುಲಕರ್ಣಿ ಸ್ವಾಗತಿಸಿದರು. ಶ್ರೀಮತಿ ಎಸ್.ಎಸ್. ಬಾಸಗಿ ಸಾಂಸ್ಕೃತಿಕ ಕಾರ್ಯ ನಿರೂಪಿಸಿದರು. ಶ್ರೀ ಬಿ.ವಿ. ಜೋಶಿ ಕಾರ್ಯಕ್ರಮ ನಿರೂಪಣೆ ಮಾಡಿದರು. ವಿದ್ಯಾರ್ಥಿಗಳು ಸಂಸ್ಕೃತ ನೃತ್ಯದೊಂದಿಗೆ ಮನರಂಜನೆ ಮಾಡಿದರು.



**ಶ್ರೀ ಗಜಾನನ ಸಂಸ್ಕೃತ ಕಾಲೇಜಿನಲ್ಲಿ 65ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು**

# ವಿಶ್ವಭಾರತಿ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತ ದಿನಾಚರಣೆ

ಮೈಸೂರು ನಗರದ ಆರಾಧ್ಯ ಮಹಾಸಭಾದ ಆಶ್ರಯದಲ್ಲಿ ನಡೆಯುತ್ತಿರುವ ವಿಶ್ವಭಾರತಿ ಸಂಸ್ಕೃತ ಪಾಠಶಾಲೆಯಲ್ಲಿ, ದಿನಾಂಕ 13.08.2011ರಂದು ಶನಿವಾರ ಸಂಸ್ಕೃತ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಆರಾಧ್ಯ ಮಹಾಸಭಾದ ಅಧ್ಯಕ್ಷರಿಂದ ಶ್ರೀ ಎಂ.ಸಿ.ವಿ. ಆರಾಧ್ಯರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆರಾಧ್ಯ ಮಹಾಸಭಾದ ಉಪಾಧ್ಯಕ್ಷರಾದ ಡಾ. ಎಂ.ಎಸ್. ವಿಶ್ವೇಶ್ವರರವರು, ಕಾರ್ಯದರ್ಶಿಗಳಾದ ಶ್ರೀ ರೇಣುಕಾರಾಧ್ಯರು ಮತ್ತು ಶ್ರೀ ಶ್ರೀಕಂಠಾರಾಧ್ಯರು ಭಾಗವಹಿಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಆರಾಧ್ಯ ಮಹಾಸಭಾದ ನಿರ್ದೇಶಕರುಗಳಾದ ಶ್ರೀ ರೇವಣ್ಣಾರಾಧ್ಯರು, ಶ್ರೀಕಂಠಾರಾಧ್ಯರು, ಮಹದೇವಾರಾಧ್ಯರು, ಶ್ರೀ ಬಿ. ಸೋಮಶೇಖರಾರಾಧ್ಯರು ಮತ್ತು ಶ್ರೀ ಆರ್. ರೇಣುಕಾರಾಧ್ಯರು ಭಾಗವಹಿಸಿದ್ದರು.

ಪಾಠಶಾಲೆ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

**ಸ್ವಾತಂತ್ರ್ಯ ದಿನಾಚರಣೆ:**

ಆರಾಧ್ಯ ಮಹಾಸಭಾದ ಆಶ್ರಯದಲ್ಲಿ ನಡೆಯುತ್ತಿರುವ ವಿಶ್ವಭಾರತೀ ಸಂಸ್ಕೃತ ಪಾಠಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಆರಾಧ್ಯ ಮಹಾಸಭಾದ ನಿರ್ದೇಶಕರಾದ ಶ್ರೀ ಮಹದೇವಾರಾಧ್ಯರು ಧ್ವಜಾರೋಹಣವನ್ನು ನೆರವೇರಿಸಿದರು. ಆರಾಧ್ಯ ಮಹಾಸಭಾದ ಕಾರ್ಯದರ್ಶಿಗಳಾದ ಶ್ರೀ ರೇಣುಕಾರಾಧ್ಯರು, ನಿರ್ದೇಶಕರುಗಳಾದ ಶ್ರೀ ರೇವಣ್ಣಾರಾಧ್ಯರು, ಶ್ರೀಮತಿ ರಾಜಮ್ಮಣ್ಣಿ ಇವರುಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.




ಆಕರ್ಷಕ ಹಾಗೂ ಅರ್ಥಗರ್ಭಿತ ಮುಖಪುಟದಿಂದ ರಾರಾಜಿಸುತ್ತಿರುವ ಈ ತ್ರೈಮಾಸಿಕ ವಾರ್ತಾಪತ್ರವು ಸಂಸ್ಕೃತ ಭಾಷೆ–ಸಾಹಿತ್ಯದ ಪರಿಪೂರ್ಣ ಮಾಹಿತಿಗಳನ್ನು ಬಿಂಬಿಸುವ ಸಂಗ್ರಹಯೋಗ್ಯವಾದ ಪತ್ರಿಕೆಯಾಗಿದೆ. ವಿಶ್ವವಿದ್ಯಾಲಯ ರಚನೆಗೊಂಡ, ಅಲ್ಪಾವಧಿಯಲ್ಲಿಯೇ ವಾರ್ತಾಪತ್ರವು ಭಾಷಾಭಿಮಾನಿಗಳೆಲ್ಲರಿಂದಲೂ ಆಕರ್ಷಿತವಾಗಿರುವುದು ಗೌರವಾನ್ವಿತ ಕುಲಪತಿಗಳ ಕಾರ್ಯದಕ್ಷತೆ ಹಾಗೂ ಸಂಪಾದಕ ಮಂಡಳಿಯ ಕಾರ್ಯನಿಷ್ಠೆಯ ಪ್ರತೀಕವಾಗಿದೆ. ಶಾಸ್ತ್ರಾಭಿಮಾನಿಗಳು ಬಹುಸಂಖ್ಯೆಯಲ್ಲಿ ಚಂದಾದಾರರೆನಿಸಿ, ವಿಶ್ವವಿದ್ಯಾಲಯದ ಈ ವಾರ್ತಾಪತ್ರವು ವಿಶ್ವಖ್ಯಾತಿ ಹೊಂದಲೆಂದು ಹಾರೈಸುತ್ತೇನೆ.

**ಸಿದ್ಧಾಂತಿ ಡಾ. ಕೆ.ಜಿ. ಪುಟ್ಟಹೊನ್ನಯ್ಯ**
ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗಕರ್ತ, ಮೈಸೂರು

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕನ್ನಡ–ಸಂಸ್ಕೃತ ತ್ರೈಮಾಸಿಕ ವಾರ್ತಾಪತ್ರದ ಸಂಪುಟ ಒಂದರ ಮೂರನೆಯ ಸಂಚಿಕೆ ಅಚ್ಚುಕಟ್ಟಾಗಿ ಮೂಡಿಬಂದಿದೆ. 'ಕುಣಿಗಲು ರಾಮಶಾಸ್ತ್ರಿ'ಯವರಂಥ ಭೂತಪೂರ್ವ ವಿದ್ವಾಂಸರುಗಳ ಪರಿಚಯವನ್ನು ಮಾಡಿಕೊಡುವ ವಿಶ್ವವಿದ್ಯಾಲಯದ ಪ್ರಯತ್ನ ಆದರಣೀಯವಾದುದಾಗಿದೆ. ಕುಣಿಗಲು ರಾಮಶಾಸ್ತ್ರಿಯವರ ಬಗ್ಗೆ ಅತ್ಯಂತ ಕ್ಲುಪ್ತವಾದ ವಿಷಯಗಳನ್ನು ಮನೋಹರವಾದ ಶೈಲಿಯಲ್ಲಿ ತಿಳಿಸಿಕೊಟ್ಟ ನಮ್ಮ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರಿಗೆ ನಾನು ಆಭಾರಿ. ಶತಾಧಿಕ ವರ್ಷಗಳಿಂದ ಸಂಸ್ಕೃತ ಶಾಸ್ತ್ರ ಪಾಠಪ್ರವಚನಗಳನ್ನು ಈ ರಾಜ್ಯದ ಸಂಸ್ಕೃತ ಕಾಲೇಜುಗಳು ಮುನ್ನಡೆಸಿಕೊಂಡು ಬರುತ್ತಿದ್ದರೂ ಸ್ವತಂತ್ರೋತ್ತರ ಕಾಲದಲ್ಲಿ ಅವಗಣನೆಗೊಳಗಾದ ಸಂಸ್ಕೃತ ಕಾಲೇಜುಗಳು ಹಾಗೂ ಶಿಕ್ಷಣಕ್ಕೊಂದು ಕಾಯಕಲ್ಪವನ್ನು ನೀಡುವುದಕ್ಕಾಗಿ ಆರಂಭಿಸಲ್ಪಟ್ಟ ಈ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಇತರ ಅಧಿಕಾರಿಗಳು ಎಲ್ಲಾ ಸಂಸ್ಕೃತ ಕಾಲೇಜುಗಳ ಸಹಕಾರವನ್ನು ಪಡೆದು ವಿಶ್ವವಿದ್ಯಾಲಯವನ್ನು ಅಭಿವೃದ್ಧಿಯ ಪಥದಲ್ಲಿ ಒಯ್ಯಲಿ ಎಂದು ಆಶಿಸುತ್ತೇನೆ.

**ವಿದ್ವಾನ್ ವೆಂಕಟರಮಣ ಹೆಗಡೆ,** ಪ್ರಾಧ್ಯಾಪಕರು,
ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾರ್ತಾಪತ್ರದ ಒಂದು, ಎರಡು ಮತ್ತು ಮೂರನೇ ಸಂಚಿಕೆಗಳನ್ನು ಓದಿದೆ. ಅದರಲ್ಲಿ ಸಂಸ್ಕೃತಕ್ಕೆ ಸಂಬಂಧಿಸಿದ ಉತ್ತಮ ಕಾರ್ಯಗಳನ್ನು ಮಾಡಿರುವ ವಿದ್ವಾಂಸರ ಸಂದೇಶ, ಸಂದರ್ಶನ, ವಿಶ್ವವಿದ್ಯಾಲಯ ನಡೆಸುತ್ತಿರುವ ಕಾರ್ಯಚಟುವಟಿಕೆಗಳ ವಿವರ, ಕುಲಪತಿಗಳ ಮತ್ತು ಸಂಪಾದಕರ ನುಡಿಗಳು ಮತ್ತು ಪ್ರತಿ ಸಂಚಿಕೆಯಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಒಂದೊಂದು ಸಂಸ್ಕೃತ ಕಾಲೇಜಿನ ಬಗ್ಗೆ ಪರಿಚಯ –ಈ ಎಲ್ಲಾ ವಿಚಾರಗಳು ತುಂಬಾ ಚೆನ್ನಾಗಿ ಮೂಡಿಬರುತ್ತಿವೆ. ಸಂಸ್ಕೃತ ವಿಶ್ವವಿದ್ಯಾಲಯ ಇದೇ ರೀತಿ ಇನ್ನೂ ಹೆಚ್ಚು ಹೆಚ್ಚು ಕ್ರಿಯಾಶೀಲ ಚಟುವಟಿಕೆಗಳನ್ನು ನಡೆಸಲೆಂದು ಆಶಿಸುತ್ತೇನೆ.

**ವಿದ್ವಾನ್ ಕೆ. ಶಿವರುದ್ರಯ್ಯ,** ಪ್ರಾಧ್ಯಾಪಕರು,
ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು

ವಾರ್ತಾಪತ್ರದ ಮುಖಪುಟವೇ ಸಂಸ್ಕೃತ ವಿದ್ವತ್ಪ್ರಭೆಯ ಸೂಚಕದಂತಿದ್ದು, ಅತ್ಯುಪಯುಕ್ತ ಮಾಹಿತಿಗಳಿಂದ ಕೂಡಿದೆ. ಮೂರನೇ ಸಂಚಿಕೆಯಲ್ಲಿ ಪ್ರಕಟವಾಗಿರುವ ವಿದ್ವನ್ಮಣಿಗಳಾದ ಕೆ.ಎಸ್. ವರದಾಚಾರ್ಯರ ಸಂದರ್ಶನ ಪತ್ರಿಕೆಗೆ ಶೋಭೆ ತಂದಿದೆ. ಉಡುಪಿ ಕಾಲೇಜಿನ ಪರಿಚಯು ಕೂಡ ಅಪೇಕ್ಷಣೀಯವಾದದ್ದು. ಈ ಪತ್ರಿಕೆ ವಿಶ್ವವಿದ್ಯಾಲಯದ ಸಾರ್ಥಕ ನಡೆಗೆ ಸಾಧನವಾಗಿದೆ. ವಿಶ್ವವಿದ್ಯಾಲಯದಿಂದ ಪ್ರಕಟವಾಗುತ್ತಿರುವ ಷಾಣ್ಮಾಸಿಕ ಸಂಶೋಧನಾ ಪತ್ರಿಕೆಯಲ್ಲಿ ಸಂಸ್ಕೃತ, ಇಂಗ್ಲಿಷ್ ಭಾಷೆಗಳ ಲೇಖನಗಳ ಜೊತೆಗೆ ಕನ್ನಡ ಭಾಷೆಯ ಲೇಖನಗಳೂ ಪ್ರಕಟಗೊಳ್ಳುವುದು ಓದುಗರ ದೃಷ್ಟಿಯಿಂದ ಅಗತ್ಯವೆನಿಸುತ್ತದೆ.

**ವಿಜಯಲಕ್ಷ್ಮಿ ಪಿ.ಎಚ್.,** ಸಾಹಿತ್ಯ ಸಹಾಯಕರು,
ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು

ಸಂಸ್ಕೃತ ವಿಶ್ವವಿದ್ಯಾಲಯ ಹೆಚ್ಚು ಕ್ರಿಯಾಶೀಲವಾಗಿ ಪ್ರಗತಿಯನ್ನು ಹೊಂದಲಿ. ಸಾವಿರಾರು ವಿದ್ಯಾರ್ಥಿಗಳು ಇದರ ಅನುಕೂಲತೆಯನ್ನು ಪಡೆಯುವಂತಾಗಲಿ. ದಯಾಮಯರಾದ ಪಾರ್ವತೀಪರಮೇಶ್ವರರು ವಿಶ್ವವಿದ್ಯಾಲಯಕ್ಕೆ ಮಂಗಳವನ್ನು ಉಂಟುಮಾಡಲಿ ಎಂದು ಆಶಿಸುತ್ತೇನೆ.

**ಶಿವಕುಮಾರಸ್ವಾಮಿ**
ವಿದ್ಯಾರ್ಥಿ, ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು

वार्तापत्रमिति नाम्ना या पत्रिका समारब्धा कर्णाटकसंस्कृतविश्वविद्यालयेन सुन्दराक्षरचित्रोपेता अतीव हृदयरञ्जिनी, मनोहारिणी च चकास्तीति अत्यन्तं सन्तोषः समभवत् अस्माकं संस्कृत–जनिभृताम्। इयं हि पत्रिका विविधज्ञानविषयिणी संस्कृतानुरागिणां बहूपकारं करोतीति नात्र संशयलेशः।

इयं हि चिरकालं जीवेत् येनास्माकं संस्कृत–संस्कृतिरपि जीवेत् इति आशास्तेऽयं जनः ।

**विद्वान् नागपतिभ ः एम्मेगुण्डि**
सहायकप्राध्यापकः,
श्रीराघवेन्द्रभारतीसवेदसंस्कृतमहाविद्यालयः, होन्नावर

कर्णाटकसंस्कृतविश्वविद्यालयस्य कुलपतीनां श्रीमतां प्रो. मल्लेपुरं जि. वेङ्कटेशमहाभागानाम् असाधारणकार्यसामर्थ्यस्य प्रद्योतिका इयं पत्रिका आविर्भूता । एषा अत्यन्तं मनोहारिणी एव सकलसंस्कृतबन्धूनामिति नात्युक्तिः।

संस्कृतमहाविद्यालयानां परिचयः, समाचरित–समारम्भाणां सचित्रनिरूपणं, विद्वद्वराणां विविध–लेखनानि कन्नडसंस्कृतोभयभाषयोः प्रकटीक्रियन्ते इति नितरां मोमुद्यते मन्मनः । इतोऽपि प्रवर्धताम् इयं पत्रिका इति हार्दम् आशासे।

**विद्वान् वि.जि. हेगडे गुड्गे,** प्राचार्यः,
श्रीराघवेन्द्रभारतीसवेदसंस्कृतमहाविद्यालयः, होन्नावर

## चिरं जीवतु देवभाषा

कर्णाटकसंस्कृतविश्वविद्यालयः संस्कृतस्य उज्जीवनार्थं महान्तं प्रयत्नं करोति इति विज्ञाय सन्तोषम् अनुभवामः। संस्कृतसेवार्थमेव अयं विश्वविद्यालयः इमां वार्तापत्रिकां समारभत इति सर्वे जानन्ति । अनया पत्रिकया विविधाः विचाराः वितीर्यन्ते । प्राचीनविदुषां परिचयोऽपि सम्भवति । अतः इयं पत्रिका अभिनन्द्या भवति । कुलपति–चरणानामाशयः, सम्पादकानामुक्तिः, विदुषां सन्देशः प्रतिक्रिया इति नैके विचाराः इमां पत्रिकां शोभयन्ति, सौन्दर्यम् अभिवर्धयन्ति च । अतः पत्रिकायाः कृते, विश्वविद्यालयस्य कृते च शुभाशंसनं वक्तुमिच्छामि। भगवान् इतोऽप्यधिकं शक्तिं प्रदद्यात् इति आराध्यदेवं प्रार्थयामहे ।

**– श्री श्री शिवकुमारनाथस्वामी,**
कल्पतरु आश्रमः, मायसन्द्र

## विलसतु भारती रसनाग्रे

संस्कृतविश्वविद्यालयेन प्रकाश्यमाना इयं “वार्तापत्रम्” इति त्रैमासिकी पत्रिका नितान्तं शोभते। पत्रिकायां विविधाः कार्यक्रमाः विश्वविद्यालयस्य निरूपिताः । विविधानां संस्कृतमहाविद्यालयानां परिचयोऽपि सर्वान् उपकरोति। अतः, विश्वविद्यालयः, कुलपतिमहोदयः, पत्रिका, पत्रिकासम्पादकाश्च नितराम् अभिनन्द्याः भवन्ति । अयं संस्कृतविश्व–विद्यालयः, इयं पत्रिका च सम्यगेव ज्ञानं प्रकाशयेत्। तत्र भगवान् भूयोभूयः सामर्थ्यं समादद्यात् ।

**– श्री श्री चन्द्रशेखरनाथस्वामी,** श्रीक्षेत्रं,
दसरीघ ः, तिपटूरु

भारतीयसंस्कृतेः आधारधराभूतस्य संस्कृतस्य अध्ययन–संशोधन–प्रचारान् मनसिकृत्य संस्थापितः कर्णाटकसंस्कृतविश्वविद्यालयः संस्कृतज्ञानां, संस्कृतानुरागिणाम् अन्तःस्थाशयस्य बाह्यरूपम् । विश्वविद्यालयात् प्रकाश्यमानं वार्तापत्रं चित्ताकर्षकम्। उपक्रमस्तु विश्वासवर्धकः । अस्मिन् प्रकाश्यमानः सारस्वतोपासकानां संस्तवः एवं प्राच्यविदुषामनुभवः ज्ञानप्रदः अपेक्षणीयश्च ।

**–विद्वान् के.आर्. श्रीधरः,** सहायकप्राध्यापकः,
श्रीमन्महाराजसंस्कृतमहापाठशाला, मैसूरु

कर्णाटकसंस्कृतविश्वविद्यालयस्य “वार्तापत्रम्” इति नाम्नी त्रैमासिकी पत्रिका अन्वर्थं शोभते । प्रतिपत्रिकां वयम् उत्तमं समाचारं जानीमः। विविधानां महाविद्यालयानां परिचयः, विविधविद्यालयस्य कार्यक्रमाणां परिचयः इति बहून् विषयान् पत्रिकाद्वारा वयं जानीमः। अतः पत्रिकायाः कृते विश्वविद्यालयस्य कृते च भैरवप्रसादं प्रार्थयामहे। तथा च संस्कृतस्य संस्कृत–विश्वविद्यालयस्य च श्रेयोन्नतिं सादरं कामयामहे ।

**– श्री श्री शम्भुनाथस्वामिनः,**
आदिचुञ्चनगिरि शाखामठः, हासन

# ಕುಲಪತಿಗಳು ನಾಡೊಳಗೆ

**ಜುಲೈ**

- ಗಾಂಧಿ ಸಾಹಿತ್ಯ ಸಂಘದಲ್ಲಿ ೦೪.೦೭.೨೦೧೧ರ ಸೋಮವಾರ ಸಂಜೆ ೫.೦೦ಕ್ಕೆ ನಡೆದ **'ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮಾ ಸಾಹಿತ್ಯ ಪುರಸ್ಕಾರ'** ಸಮಾರಂಭದಲ್ಲಿ ಮಾನ್ಯ ಕುಲಪತಿಗಳು ಭಾಗವಹಿಸಿ ಡಾ. ನಾ ಮೊಗಸಾಲೆಯವರಿಗೆ ಪುರಸ್ಕಾರವನ್ನು ನೀಡಿದರು.
- ೦೮.೦೭.೨೦೧೧ರ ಬೆಳಿಗ್ಗೆ ೧೦.೩೦ಕ್ಕೆ ಜೆ.ಎಸ್.ಎಸ್. ವಿದ್ಯಾಪೀಠದಲ್ಲಿ ನಡೆದ **'ವೀರಶೈವ ಪಾರಿಭಾಷಿಕ ಪದಕೋಶಃ'** ಲೊಕಾರ್ಪಣ ಸಮಾರಂಭದ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಸಾನ್ನಿಧ್ಯವನ್ನು ಸುತ್ತೂರುಶ್ರೀಗಳು ವಹಿಸಿದ್ದರು. ಸಮ್ಮುಖ ಬಿಜಾಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರಸ್ವಾಮಿಗಳು ವಹಿಸಿದ್ದರು. ಗ್ರಂಥವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀ ಗೋವಿಂದ ಕಾರಜೋಳ ಅವರು ಲೋಕಾರ್ಪಣ ಮಾಡಿದರು.
- ೧೬.೦೭.೨೦೧೧ರಂದು ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಸಮುದಾಯ ಭವನದಲ್ಲಿ ನಡೆದ **'ವೀರಶೈವ-ಲಿಂಗಾಯತ: ತಾತ್ವಿಕ ಸೈದ್ಧಾಂತಿಕ ಮತ್ತು ಆಚರಣಾಮೂಲ ಬೆಳವಣಿಗೆಗಳು'** ರಾಜ್ಯಮಟ್ಟದ ವಿಚಾರ ಸಂಕಿಣದಲ್ಲಿ ಮಾನ್ಯ ಕುಲಪತಿಗಳು ಭಾಗವಹಿಸಿದ್ದರು. ಶ್ರೀಮದ್ರಂಭಾಪುರಿ ಸ್ವಾಮೀಜಿಯವರು ಕಾರ್ಯಕ್ರಮದ ದಿವ್ಯಸಾನ್ನಿಧ್ಯವನ್ನು ವಹಿಸಿದ್ದರು. ಸಮಾರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು, ಮಾಜಿ ಶಿಕ್ಷಣ ಸಚಿವರು ಭಾಗವಹಿಸಿದ್ದರು.
- ಜಯನಗರದ ನ್ಯಾಷನಲ್ ಕಾಲೇಜಿನ ಸಭಾಂಗಣದಲ್ಲಿ ೨೨.೦೭.೨೦೧೧ರಂದು ನಡೆದ **ಶ್ರದ್ಧಾ ಸಾಂಸ್ಕೃತಿಕ ಸಂಸ್ಕೃತ ಪತ್ರಿಕೆ ಬಿಡುಗಡೆ** ಕಾರ್ಯಕ್ರಮದಲ್ಲಿ ಮಾನ್ಯ ಕುಲಪತಿಗಳು ಭಾಗವಹಿಸಿ, ಪತ್ರಿಕೆಯನ್ನು ಬಿಡುಗಡೆ ಮಾಡಿದರು. ಸಂಸ್ಕೃತದ ಹಿರಿಮೆ-ಗರಿಮೆಗಳನ್ನು ವಿದ್ಯಾರ್ಥಿಗಳಿಗೆ ಉಪನ್ಯಾಸದ ಮೂಲಕ ತಿಳಿಸಿಕೊಟ್ಟರು.
- ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ३೦.೦೭.೨೦೧೧ ರಂದು ಆಯೋಜಿಸಿದ್ದ ೨೦೧೧-೧೨ನೇ ಸಾಲಿನ ಸಂಸ್ಕೃತ ಕಾಲೇಜಿನ ಶೈಕ್ಷಣಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದಲ್ಲಿ ಮಾನ್ಯ ಕುಲಪತಿಗಳು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಈ ಸಮಾರಂಭದ ಸಾನ್ನಿಧ್ಯವನ್ನು ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಸ್ವಾಮೀಜಿಯವರು ವಹಿಸಿದ್ದರು.

**ಆಗಸ್ಟ್**

- ೦೬.೦೮.೨೦೧೧ರಂದು ತುರುವೇಕೆರೆ ತಾಲೂಕಿನಲ್ಲಿ ನಡೆದ **ಪುಸ್ತಕಗಳ ಬಿಡುಗಡೆ ಸಮಾರಂಭ**ದಲ್ಲಿ ಮಾನ್ಯ ಕುಲಪತಿಗಳು ಭಾಗವಹಿಸಿ ಡಾ. ಕೆ. ಭೈರಪ್ಪ ಅವರ ಸಮಾಜವಿಜ್ಞಾನಕ್ಕೆ ಸಂಬಂಧಿಸಿದ ಮೂರು ಕನ್ನಡ ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿದರು.
- ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜಿನಲ್ಲಿ ೧೩.೦೮.೨೦೧೧ರ ಶನಿವಾರ ಸಂಜೆ ನಡೆದ **'ಸಂಸ್ಕೃತ ಸಪ್ತಾಹವಿಶೇಷೋತ್ಸವ'** ಉದ್ಘಾಟನಾ ಸಮಾರಂಭದಲ್ಲಿ ಮಾನ್ಯ ಕುಲಪತಿಗಳು ಭಾಗವಹಿಸಿ ಸಮಾವೇಶವನ್ನು ಉದ್ಘಾಟಿಸಿದರು.
- ಬೆಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ೨೦.೦೮.೨೦೧೧ರಂದು ನಡೆದ **'ಜಾನಪದ ಕ್ರೀಡೆಗಳು'** ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಕುಲಪತಿಗಳು ಭಾಗವಹಿಸಿದ್ದರು. ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಗೊ.ರು.ಚ ಅವರು ಸಮಾರಂಭದಲ್ಲಿ ಭಾಗವಹಿಸಿದ್ದರು.
- ೨೧.೦೮.೨೦೧೧ರಂದು ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ **ಪುಸ್ತಕಗಳ ಬಿಡುಗಡೆ ಸಮಾರಂಭ**ದಲ್ಲಿ ಮಾನ್ಯ ಕುಲಪತಿಗಳು ಭಾಗವಹಿಸಿ ಡಾ. ಎಚ್.ಟಿ. ಪೋತೆಯವರ ಎರಡು ಪುಸ್ತಕಗಳನ್ನು ಬಿಡುಗಡೆ ಮಾಡಿದರು.
- ೨೫.೦೮.೨೦೧೧ರಂದು ಕಬ್ಬನ್‌ಪಾರ್ಕಿನ ಶಿಕ್ಷಕರ ಭವನದಲ್ಲಿ ನಡೆದ **ಪುಸ್ತಕಗಳ ಬಿಡುಗಡೆ ಸಮಾರಂಭ**ದಲ್ಲಿ ಭಾಗವಹಿಸಿದ ಕುಲಪತಿಗಳು ಡಾ. ಕೆ. ಚೌಡಯ್ಯ ಅವರ ನಾಲ್ಕು ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿದರು.
- ತುಮಕೂರು ಜಿಲ್ಲೆಯ ನಿಟ್ಟೂರು ಗ್ರಾಮದಲ್ಲಿ ೨೬.೦೮.೨೦೧೧ರಂದು ಬೆಳಿಗ್ಗೆ ನಡೆದ ತುಮಕೂರು ಜಿಲ್ಲಾ ಸಂಸ್ಕೃತ ಶಿಕ್ಷಕರ **'ಸಂಸ್ಕೃತೋತ್ಸವ'**ದಲ್ಲಿ ಮಾನ್ಯ ಕುಲಪತಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.
- ೨೭.೦೮.೨೦೧೧ರ ಶನಿವಾರ ಬೆಳಿಗ್ಗೆ ನಡೆದ **ಪುಸ್ತಕ ಲೋಕಾರ್ಪಣ ಸಮಾರಂಭ**ದಲ್ಲಿ ಭಾಗವಹಿಸಿದ ಮಾನ್ಯ ಕುಲಪತಿಗಳು ಬಿ. ಲೀಲಾವತಿ ಅಡಿಗ ಮತ್ತು ಡಾ. ಅನಸೂಯಾದೇವಿ ಅವರು ಸಿದ್ಧಪಡಿಸಿದ್ದ **'ಕುಂದಗನ್ನಡ ಗಾದೆಗಳು'** ಪುಸ್ತಕವನ್ನು ಬಿಡುಗಡೆ ಮಾಡಿದರು. ಸಂಜೆ ೫.೩೦ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಗೋರಖನಾಥ ತಪೋವನ, ತಿಪ್ಪೂರು ಇವರು ನಡೆಸಿದ **'ಗೋರಖನಾಥ ಪುರಸ್ಕಾರ'**

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

- ನಯನ ಸಭಾಂಗಣದಲ್ಲಿ ೨೮.೦೮.೨೦೧೧ರಂದು ನಡೆದ ಡಾ. ನಾ ಮೊಗಸಾಲೆಯವರ **'ಉಲ್ಲಂಘನೆ: ದೃಷ್ಟಿ–ಸೃಷ್ಟಿ' ವಿಚಾರ ಸಂಕಿರಣದ** ಉದ್ಘಾಟನ ಸಮಾರಂಭದ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು.

**ಸೆಪ್ಟೆಂಬರ್**

- ಶ್ರೀ ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘದವರು ದಿನಾಂಕ ೦೫.೦೯.೨೦೧೧ರಂದು ಬಸವ ಸಭಾಂಗಣದಲ್ಲಿ ಆಯೋಜಿಸಿದ್ದ **'ಶಿಕ್ಷಕರ ದಿನಾಚರಣೆ'** ಕಾರ್ಯಕ್ರಮದಲ್ಲಿ ಮಾನ್ಯ ಕುಲಪತಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.
- ಉತ್ತರಾಖಂಡ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ ಸಂಯುಕ್ತವಾಗಿ ೨೦೧೧ರ ಸೆಪ್ಟೆಂಬರ್ ೦೯–೧೧ರವರೆಗೆ **'ಅಂತಾರಾಷ್ಟ್ರೀಯ ಸಂಸ್ಕೃತ ಶೋಧ ಸಮ್ಮೇಳನ'**ವನ್ನು ಹರಿದ್ವಾರದಲ್ಲಿ ಆಯೋಜಿಸಿತ್ತು. ಮಾನ್ಯ ಕುಲಪತಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿ ೧೦.೦೯.೨೦೧೧ ರಂದು ನಡೆದ **'ದಕ್ಷಿಣ ಭಾರತೀಯ ಭಾಷೆಗಳು ಮತ್ತು ಸಂಸ್ಕೃತ ಹಾಗೂ ಪಶ್ಚಿಮ ಭಾರತೀಯ ಭಾಷೆಗಳು ಮತ್ತು ಸಂಸ್ಕೃತ'** ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿ **'ಸಂಸ್ಕೃತಂ ಕನ್ನಡಂ ಚ'** ಎಂಬ ವಿಷಯವನ್ನು ಮಂಡಿಸಿದರು.
- ೧೫.೦೯.೨೦೧೧ರಂದು ಮಾಗಡಿ ತಾಲ್ಲೂಕಿನ ಶ್ರೀ ತೋಂಟದಾರ್ಯ ಸಂಸ್ಕೃತ ಪಾಠಶಾಲೆಯಲ್ಲಿ ನಡೆದ **'ಜಿಲ್ಲಾಮಟ್ಟದ ಸಂಸ್ಕೃತೋತ್ಸವ'** ಸಮಾರಂಭದಲ್ಲಿ ಮಾನ್ಯ ಕುಲಪತಿಗಳು ಭಾಗವಹಿಸಿ, ಪ್ರತಿಭಾವಂತರಿಗೆ ಪ್ರತಿಭಾ ಪುರಸ್ಕಾರವನ್ನು ವಿತರಿಸಿದರು.
- ೧೬.೦೯.೨೦೧೧ರಂದು ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಡೆದ 'ವಸುಂಧರೋತ್ಸವ ೨೦೧೦–೧೧' ಉದ್ಘಾಟನಾ ಸಮಾರಂಭದಲ್ಲಿ ಮಾನ್ಯ ಕುಲಪತಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಪ್ರಸಿದ್ಧ ಸರೋದ್ ವಾದಕ ಡಾ. ರಾಜೀವ ತಾರಾನಾಥ್ ಅವರನ್ನು ಪುರಸ್ಕರಿಸಿದರು. ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ಕೆ.ಎಸ್. ರಂಗಪ್ಪ ಉದ್ಘಾಟಿಸಿದರು.
- 'ಅಕ್ಷರಂ' ಕಾರ್ಯಾಲಯದಲ್ಲಿ 'ಸಂಭಾಷಣ ಸಂದೇಶಃ' ಪತ್ರಿಕೆಯ 'ವಾಚಕಾನಾಂ ಸಮಾವೇಶಃ' ಕಾರ್ಯಕ್ರಮದಲ್ಲಿ ಮಾನ್ಯ ಕುಲಪತಿಗಳು ೧೮.೦೯.೨೦೧೧ರಂದು ಭಾಗವಹಿಸಿ ಮಾತನಾಡಿದರು. ಪತ್ರಿಕೆಯ ಸಂಪಾದಕರಾದ ವಿದ್ವಾನ್ ಜನಾರ್ದನ ಹೆಗಡೆ ಮತ್ತು ಶ್ರೀ ದಿವಾಕರ ಶಾಸ್ತ್ರೀ ಸಮಾರಂಭದಲ್ಲಿ ಮಾತನಾಡಿದರು.
- ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ ಸಹಯೋಗದೊಂದಿಗೆ ಬಿ.ಎನ್.ಇ.ಎಸ್. ಕಾಲೇಜು ೨೦೧೧ರ ಸೆಪ್ಟೆಂಬರ್ ೨೧ ಮತ್ತು ೨೨ರಂದು ಆಯೋಜಿಸಿದ್ದ **'ರತ್ನಾಕರವರ್ಣಿ: ಪ್ರಸ್ತುತತೆ ಮತ್ತು ಇತಿವೃತ್ತ'** ಎರಡು ದಿನಗಳ ರಾಜ್ಯಮಟ್ಟದ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಮಾನ್ಯ ಕುಲಪತಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.
- ೨೩.೦೯.೨೦೧೧ರಂದು ಮಂಗಳೂರಿನ ಪುರಭವನದಲ್ಲಿ ನಡೆದ **'ಡಾ. ಎಂ. ವೀರಪ್ಪ ಮೊಯಿಲಿ ಸಾಹಿತ್ಯಾವಲೋಕನ'** ಕಾರ್ಯಕ್ರಮವನ್ನು ಮಾನ್ಯ ಕುಲಪತಿಗಳು ಉದ್ಘಾಟಿಸಿದರು. ಸಮಾರಂಭದಲ್ಲಿ ಪ್ರೊ. ಬಿ.ಎ. ವಿವೇಕ ರೈ, ಡಾ. ಪ್ರಧಾನ ಗುರುದತ್ತ ಮುಂತಾದವರು ಭಾಗವಹಿಸಿದ್ದರು.
- ೩೦.೦೯.೨೦೧೧ರಂದು ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ನಡೆದ **'ಪುಸ್ತಕಗಳ ಬಿಡುಗಡೆ'** ಸಮಾರಂಭದಲ್ಲಿ ಮಾನ್ಯ ಕುಲಪತಿಗಳು ಭಾಗವಹಿಸಿ ಪ್ರೊ. ವ್ಹಿ.ಜಿ. ಪೂಜಾರ ಅವರ ಅಭಿನಂದನ ಗ್ರಂಥ **'ಅನುಶೀಲನ'** ಹಾಗೂ **'ವೀರಶೈವ ಸಾಹಿತ್ಯದಲ್ಲಿ ಪವಾಡಕಥೆಗಳು'** ಕೃತಿಯನ್ನು ಲೋಕಾರ್ಪಣೆ ಮಾಡಿದರು.

❑

## शुभसन्देशः

सांस्कृतिककर्णाटकराज्ये २०१० तमे वर्षे प्रथमः संस्कृतविश्वविद्यालयः समारब्धः इति सन्तोषः सञ्जातः। क्रियाशीलः प्रो. मल्लेपुरं जि. वेङ्कटेशमहाभागः कुलपतित्वेन नियुक्तः, तेषां योग्यमार्गदर्शनेऽयं विश्वविद्यालयः उत्तरोत्तरं वर्धमानो भवतु।

अस्मिन् विश्वविद्यालये नीतिप्रधानं धर्मशास्त्रं, भूतिप्रधानं भौतशास्त्रं, मोक्षप्रधानं वेदान्तशास्त्रम् इत्यादयः बहवो हि विषयाः बोध्यमानाः भवेयुः। भारतीयसांस्कृतिकशोधकार्याणि निरन्तरं क्रियमाणानि स्युः। कर्णाटकराज्ये विद्यमानासु पाठशालासु छात्राः शिक्षकाश्च संस्कृतभाषाबोधने सशक्ता भवेयुः इति आशास्महे। विश्वविद्यालयस्य वार्तापत्रं चारूरूपेण वर्तते। **– श्रीमन्तः जगद्गुरवः डा. अन्नदानीश्वरमहास्वामिनः**

# सुसम्पन्नः स्नातकपूर्वदीक्षान्तसमारोहः



**स्नातकपूर्वदीक्षान्तसमारोहे प्रो. डि. प्रह्लादाचार्याः, उन्नतशिक्षणविभागस्य प्रधानकार्यदर्शिनी श्रीमती जि. लता कृष्णराव्, कुलपतिः, कुलसचिवः च ।**

"संस्कृतं न केवलं वैदिकभाषा, अपि तु भारतस्य स्वाभिमानप्रचोदयित्री वर्तते" इति स्वाभिप्रायं प्रकटयन्तः तिरुपतिस्थ–राष्ट्रियसंस्कृतविद्यापीठस्य भूतपूर्वकुलपतयः महामहोपाध्यायाः प्रो. डि. प्रह्लादाचार्यवर्याः अवोचन् ।

संस्कृतशिक्षणनिर्देशनालयेन आयोजिते स्नातकपूर्वदीक्षान्तसमारोहे दीक्षान्तभाषणं कुर्वद्भिः तैः एवम् अभिहितम् । स्ववचनानि अनुवर्तयन्तः ते – "संस्कृतं केवलं वैदिकभाषा इति केषाञ्चन अल्पज्ञानाम् आशयः । न केवलं वैदिकैः, अपि तु वेदप्रामाण्यम् अनभ्युपगन्तृभिः चार्वाक–बौद्ध–जैनादिभिः अपि संस्कृतभाषयैव ग्रन्थाः रचिताः । संस्कृतभाषा मतपन्थादिभेदम् अतिक्रम्य भारतव्यापिनी अवर्तत। संस्कृतवाङ्मये विख्यातस्य महर्षेः पाणिनेः जन्म साम्प्रतिके पाकिस्थानप्रदेशे । इण्डोनेशिया देशपर्यन्तमपि संस्कृतभाषा प्रसृता आसीत् । अस्माकं देशस्य सर्वाः अपि भाषाः तत्तत्प्रदेशस्य नाम्ना, प्रभावेण च संयुक्ताः सन्ति । यथा – कन्नड, तमिळु, तेलुगु, इत्यादि। किन्तु संस्कृतभाषा न कस्यापि प्रदेशस्य भाषा । इदमेव अस्याः वैशिष्ट्यम् । सहस्रवर्षेभ्यः पूर्वं विद्यमानः वाक्यविन्यासः एव अधुनापि व्यवह्रियमाणः वर्तते। व्यासवाल्मीकिप्रभृतिभिः प्रयुक्ता भाषैव अधुनापि परिलक्ष्यते । तावता इयं निर्जीवभाषेति कथमिव वक्तुं शक्यम् ?

संस्कृतं देवभाषा इति गीयते । अनेन कारणेन सा मानवानां भाषा भावितुं नार्हति इति केषाञ्चन आल्पज्ञानां वादः । स्वविद्यायाः कारणेन या उत्तमा भाषा भाष्यते सैव संस्कृता इत्यूचुः । संस्कृतं विना भारतस्य अस्तित्वं नास्ति। संस्कृतं भारतीयसंस्कृतिरूपस्य मौक्तिकहारस्य पोषणसूत्रं वर्तते । संस्कृतं विनष्टं चेत् संस्कृतिरपि नष्टा भविष्यति । अतः संस्कृतेः रक्षणाय संस्कृतम् अत्यन्तम् आवश्यकम्" इति अवदन् । एतैः महोदयैः, साहित्यपरीक्षायाम् अत्यधिकान् अङ्कान् प्राप्य विशिष्टश्रेणीं प्राप्य उत्तीर्णतां प्राप्तवद्भ्यः छात्रेभ्यः पदकानि वितीर्य प्रोत्साहनं कृतम् ।

२०.०९.२०११ तमे दिनाङ्के कार्यक्रमेऽस्मिन् कर्णाटकसर्वकारस्य उन्नतशिक्षणविभागस्य प्रधानकार्यदर्शिनी श्रीमती जि. लता कृष्णराव् महाभागा उपस्थिता आसीत्। तया अत्युत्तम–साधनापुरस्कारः पाठशालाभ्यः प्रदत्तः।

सन्दर्भेऽस्मिन् कर्णाटकसंस्कृतविश्व–विद्यालयस्य कुलपतिः प्रो. मल्लेपुरं जि. वेङ्कटेशवर्यः कार्यक्रमस्य आध्यक्ष्यम् ऊढ्वा निवृत्तानां पाठशालाध्यापकानां सम्माननम् अकरोत् ।

कार्यक्रमेऽस्मिन् कुलसचिवः डा. चन्द्रमौलि एस्. नाय्करवर्यः, संस्कृतशिक्षणनिर्देशनालयस्य निर्देशकः डा. श्रीनिवास वरखेडिमहोदयः च वेदिकायाम् उपस्थितौ आस्ताम् ।

# समुद्घाटिता संस्थापनाविशेषोपन्यासमाला




**संस्थापनाविशेषोपन्यासमालां स्वीयैः वचोकुसुमैः समुद्घाटयन्तः डा. बन्नञ्जे गोविन्दाचार्यवर्याः।**

कर्णाटकसंस्कृतविश्वविद्यालयेन स्वीकृता विनूतना योजना संस्थापनाविशेषोपन्यासमाला इति। अस्याः उपन्यासमालायाः समुद्घाटनं कर्णाटकराज्यस्य प्रतिष्ठां दिगन्तेषु विस्तारयद्भिः पद्मश्रीविभूषितैः वेदविदान्तादिशास्त्रमर्मज्ञैः डा. बन्नञ्जे गोविन्दाचार्यवर्यैः, भारतीयमनशास्त्रस्य मूलतत्त्वानि इति विषये उपन्यासपूर्वकम् अकारि। अयं कार्यक्रमः बेङ्गलूरुनगरे विद्यमानायाः प्रसिद्धायाः गोखलेसार्वजनिकविचारसंस्थायाः सभाङ्गणे, तस्याः एव संस्थायाः सहभागित्वे च २८.८.२०११ तमे दिनाङ्के प्रवृत्तः ।

भारतीयमनश्शास्त्रस्य मूलतत्त्वानि इति अयं विषयस्तु अस्पृष्टपूर्वः । मनश्शास्त्रस्य योगदानं समग्रमपि विदेशीयानाम् एव इति बहूनाम् आशयः। तादृशेषु एषु दिनेषु आचार्याणां दृष्टिः नवनवीना वर्तते । मनश्शास्त्रम् आधुनिकं विज्ञानम् । तच्च तत्त्वशास्त्रापेक्षया नहि भिन्नम् । घृतमिव पयसि निगूढं तत्त्वशास्त्रे निगूढं मनश्शास्त्रम् आविष्कुर्वद्भिः नानाशास्त्रपारदृश्वभिः आचार्यैः अस्मिन् विषये नूतनं भाष्यं व्यरचि ।

तेषाम् उपन्यासस्य सारः – केचन स्वयंप्राज्ञंमन्यमानाः मनोविज्ञानमितीदं पश्चिमदेशविदुषाम् उपायनमिति आचक्षते । तावन्तं कालम् अविदितं भारतीयानामिति। नेदं समीचीनम्। पश्चिमदेशीयाः विपश्चितो मन्यन्ते – तत्त्वशास्त्रमन्यत्, मनश्शास्त्रमन्यत् इति । नेयं भारतीयानां चिन्तनसरणिः । तेषां तत्त्वशास्त्रं मनश्शास्त्रमिति अद्वैतम्। तत्त्वशास्त्रस्य महाद्रुमस्य विस्तारोऽयं मनश्शास्त्रमिति । युक्ता चेयं भारतीया प्रक्रिया । विना तत्त्वविज्ञानं कथं मनसः आन्तरिकी गतिर्विज्ञायेत ? उपनिषदपि इत्थमेव उपदिशति – घृतमिव पयसि निषक्तं भूतेभूते च वसति विज्ञानम् । सततं मन्थयितव्यं मनसा मन्थानभूतेन इति । सर्वाः प्रकृतयः काममूलाः इति फ्रायड्प्रभृतयो मन्यन्ते। किन्त्विदं सम्पूर्णतया अङ्गीकर्तुम् अशक्यम्। अन्तःकरणं – मनः, बुद्धिः, अहङ्कारः, चित्तं, चेतनेति पञ्चविधम्। पञ्चमो वेदः इति विद्वद्भिः आदृतं महाभारतं मनोविज्ञानस्य पद्यमिति स्वयं महाभारतमेव घोषयति स्म – मन्वादि केचित् ब्रुवते ह्यास्तीकादि तथापरे । तथोपरिचराद्यन्ये भारतं परिचक्षते ॥ इति । महाभारतस्य बहूनि विवरणानि विद्यन्ते । कृष्णनेतृकाणां पाण्डवानां चरितमिदं, तेन आस्तिकानां विजयोऽत्र निरूप्यते इति आस्तीकं नाम विवरणम्। तदिदम् ऐतिहासिकं निरूपणम्। अथ सर्वाणि नामानि सर्वाण्यप्यक्षराणि भगवत्पराणि इतीदं द्वितीयम् आध्यात्मिकं नाम विवरणम् । अस्य विवरणस्य सारसङ्ग्रहो

**(३१ तमे पृष्ठे अनुवर्तते ।)**

# महामहोपाध्यायः प्रा. के. टि. पाण्डुरङ्गिवर्यः

सन्दर्शकः – विद्वान् टि. एन्. प्रभाकरः



संस्कृतस्य अध्ययनाध्यापनसंशोधनेषु प्रा. कृष्णाचार्य तम्मण्णाचार्य पाण्डुरङ्गिमहाशयस्य नाम चिरपरिचितम्। ९३वर्षीयोऽयं पण्डितप्रवरः धारवाड-कोलार-बेङ्गलूरुनगरीयेषु सर्वकारीयमहाविद्यालयेषु संस्कृतोपन्यासक आसीत् । सेवान्तेऽयं बेङ्गलूरु-विश्वविद्यालयस्य संस्कृतस्नातकोत्तरविभागीयस्थापक-विभागाध्यक्षः आसीत् । तथैव मिथिक् संस्थाध्यक्षेण सता अनेन पूर्णप्रज्ञ-विद्यापीठस्य कुलपतिपदमलङ्कृत्य संस्कृतसेवा कृता। महामहोपाध्यायः प्रा. के. टि. पाण्डुरङ्गिवर्यः भारतस्य राष्ट्रपतिपुरस्कारेण, कर्णाटक-राज्यप्रशस्त्या, अन्यैः दशाधिकैः पुरस्कारैश्च विभूषितः। शताधिकानि शोधलेखनानि दशाधिकानि मौलिक-पुस्तकानि च अनेन महाभागेन संरचितानि । महाविद्यालयशिक्षणविभागीयस्य मैसूरुवलयस्य सहनिर्देशकेन प्रा. टि. एन्. प्रभाकरेण प्रा. पाण्डुरङ्गिमहाशयः वार्तापत्राय सन्दर्शितः। अस्य मुख्यांशान् प्रकाशयितुं वार्तापत्रं प्रमोदते । – सम्पादिका

**सन्दर्शकः** – वन्दनीय पाण्डुरङ्गि आचार्य, कर्णाटकसंस्कृतविश्वविद्यालयस्य वार्तापत्रं भवन्तं सन्दर्शितुं मुदमनुभवति। भवतां सन्निधौ मामकाः केचित् प्रश्नाः उपस्थाप्यन्ते ।

**पाण्डुरङ्गिवर्यः** – स्वैरं हि पृच्छयताम् । संस्कृतविश्वविद्यालयः बहुमुखशैक्षिककार्याणि निर्वहतीति भूयसे प्रमोदाय कल्पते ।

**सं** – पण्डितवर्य, अत्रभवान् भवान् संस्कृताध्ययने कृतभूरिपरिश्रमः। देशेषु विदेशेषु च भवान् विख्यातः। अतः संस्कृताध्ययनं भारते कथं प्रवर्तते इति उद्बोधयितुं शक्यते वा ?

**पा** – निश्चयेन । सामयिकोऽयं प्रस्तावः । भारते संस्कृताध्ययनं द्वेधा प्रवर्तते । परम्परागतशास्त्रीयरीत्या महापाठशालासु, गुरुकुलेषु पण्डितगृहेषु च प्रवर्तते। नवीनविधानेन आधुनिकविश्वविद्यालयेषु कलाशालासु च प्रवर्तते। प्रथमप्रकारे शास्त्रग्रन्थानां प्रतिपदं प्रतिवाक्यं च पाठः भवति, येन व्युत्पत्तिः सम्पाद्यते। पूर्वस्मिन् शतके शताधिकाः महापाठशालाः प्रादेशिकनृपैः संस्कृताभिमानिभिश्च स्थापिताः पालिताश्च । इदानीन्तनकाले राष्ट्रियसंस्कृतसंस्थानद्वारा अङ्गीकृतासु आदर्शपाठशालासु परम्परागतक्रमेण शास्त्रपाठाः, साहित्यपाठाश्च प्रवर्तन्ते। मिलित्वा शताधिकाः छात्राः शास्त्रनिपुणाः साहित्यकोविदाः भवन्ति । विश्वविद्यालयेषु कलाशालासु च विद्यार्थिनः संस्कृतम् अधीरते। सहस्रशः छात्राः संस्कृतं भाषात्वेन पठन्ति । विशेषविषयत्वेन शताधिकाः पठन्ति । तथापि सङ्ख्येयम् अतृप्तिकरी । परन्तु भारतस्य सर्वप्रदेशेषु अधीयमाना भारतीयभाषा केवलं संस्कृतमेव ।

**सं** – आङ्ग्लभाषा सर्वत्रेदानीं पाठ्यते । तद्विषये भवतां प्रतिक्रिया का ?

**पा** – यद्यपि विश्वविद्यालयेषु कलाशालासु च आङ्ग्लभाषा पाठ्यते, तथापि तस्य ज्ञानं सार्वत्रिकं न भवति। भारतीयजनसङ्ख्यायां ५% जनाः एव आङ्ग्लभाषां जानन्ति। परन्तु सर्वेऽपि जनाः प्रान्तीयभाषामेव जानन्ति । संस्कृतभाषा तु सर्वप्रदेशेषु पण्डितप्रपञ्चे च परिचितास्ति। जनाः प्रान्तीयभाषाभ्यासेनापि परोक्षं संस्कृतं किञ्चिद्वा जानन्त्येव ।

**सं** – श्रीमन्, भवतां संस्कृताध्ययनं सकृत् स्मर्यते वा ?

**पा** – अस्तु। प्राचीनशास्त्रपद्धत्या मम पितुः पदमूले एव काव्यनाटकान्यधीतानि । तदनन्तरं साङ्गिलनगरे, मैसूरुनगरस्थमहाराजसंस्कृत-पाठशालायाम्, अण्णामलैविश्वविद्यालये च अधीतम् । पश्चात् प्रौढशालाशिक्षकत्वेन नियुक्तोऽहम्। अनन्तरम्, आधुनिकाध्ययनविधानेन मद्रास्विश्वविद्यालये काशीहिन्दूविश्वविद्यालये च मया बाह्यविद्यार्थिना सता बि.ए., एम्.ए. च अधीतम्। हवले दिगम्बरशास्त्री, दण्डपाणि दीक्षितः, कुप्पुस्वामी शास्त्री, बि.एन्.के.शर्मा, के.श्रीनिवासाचार्यः च मम प्रातःस्मरणीयाः गुरुपादाः ।

**सं** – नवनवीनशिक्षणशाखासक्तानां सामान्यजनानां कृते संस्कृतज्ञानं कीदृशं स्यात् ?

**पा** – अद्यतनदिनेषु बहुजनानां मनस्सु 'न मया संस्कृतमधीतम्' इति विषादभावः दरीदृश्यते। अतः, तादृशेभ्यः, तथा च इदानीं ये शिक्षादाने विद्यालयं प्रविष्टाः तरुणाः, तेभ्यः संस्कृतस्य प्राथमिकं ज्ञानं सुभाषित-पञ्चतन्त्रकथा-भगवद्गीताद्वारा प्रदातव्यम्। सरलमहाकाव्यनाटकानां कञ्चिद्भागं पाठयित्वा संवादगोष्ठ्यः आयोजनीयाः। अन्त्याक्षरी, वक्तृत्वकौशलस्पर्धा अपि संयोजनीयः। येन ते भाषापरिचयं मौल्यपरिचयञ्च प्राप्नुयुः । 'नष्टं लब्धम्' इत्यपि भावनोदीयात् तेषु ।

**सं** – संस्कृतशास्त्राणि वर्तमाने भौतिकयुगे कथम् उपादेयानि भवन्ति ?

**पा** – यद्यपि अद्यतनकालस्य प्रगतविज्ञान-विचाराः संस्कृतशास्त्रेषु न सन्ति, तथापि आधुनिकविज्ञानस्य बहवो मूलविचाराः वैशेषिकसाङ्ख्येत्यादि शास्त्रेत्यादि शास्त्रेषूपलभ्यन्ते । परमाणुवादः, परिणामवादः अत्रोदाहरणीयौ । वृक्षलतादिकोशग्रन्थाः, वज्रमौक्तिकादिकोशाः, ताम्रपित्तलादिकोशग्रन्थाः, आयुर्वेदकोशग्रन्थाः, अश्वशास्त्रगजशास्त्रादि-ग्रन्थाश्चोपलभ्यन्ते । भारतस्य दौर्भाग्यं यत् संस्कृताध्येतारः, केवलम् अलङ्कारवेदान्त-व्याकरणादिशास्त्रेष्वेव रमन्ते इति वक्तुं सीदत्ययं जनः। अतः, सहस्रशो ग्रन्थाः कालकवलीकृताः। १७शतकपर्यन्तं जगत्यस्मिन् योऽयं ज्ञानसङ्ग्रह आसीत्, सोऽयं बहुधा संस्कृते एव निहित आसीत्। अमीषु त्रिशतवर्षेषु संस्कृतभाषा आधुनिकज्ञानेन वञ्चिता । इदानीमपि यद्याधुनिकज्ञानं संस्कृतेऽवतरति, तर्हि आगामि ५० वर्षेषु संस्कृतभाषा पुनश्च परिपुष्टा भविष्यति। फ्रान्स्, जर्मनि, इटलि –इत्यादिदेशेषु आधुनिकं विज्ञानं तन्त्रज्ञानञ्च देशीयभाषास्वेव प्रवर्धितम्। तैरद्यापि आङ्ग्लभाषा नैवाश्रीयते। इयमेव स्थितिः चैना, जपान् देशयोरपि । ऐरोप्यभाषाणां पदसम्पत् सीमिता । संस्कृतपदसम्पत् अपरिमिता । एवं सति संस्कृतं सर्वेषु क्षेत्रेषु प्रवेष्टुमर्हति। परन्तु अस्य इच्छाशक्तिः अपेक्षिता । नायं दोषः संस्कृतभाषायाः, अपि तु अस्माकमेव ।

**सं** – इदानीन्तनकाले कर्णाटकसंस्कृत-विश्वविद्यालयः कथं कार्यशीलस्स्यात् ?

**पा** – परम्परागताध्ययनरीतिः सुतरां परिरक्षणीया। सा खलु जीवातुभूता संस्कृतप्रसाराय। अनया सहैव भौतिकविज्ञानशाखानां प्राचीनभौतशास्त्र–रसायनशास्त्रगणितशास्त्राणि इत्यादीनां तलस्पर्शिबोधनाय, संशोधनाय यत्नः आधेयः। विशिष्य भाषाध्ययनम् इत्युक्ते व्याकरणशास्त्रम्, आधुनिकभाषाध्ययनस्य मूलं भवेत्। एवञ्च, धर्मशास्त्राणि आधुनिकसमाजविज्ञानेन, कौटिलीयार्थशास्त्रम् आधुनिकराजनीति–अर्थशास्त्रेण, मनुवसिष्ठपराशरस्मृतयः संविधानपौरनीति–अध्ययनेन तौलनिकाध्ययनं भवेत्, येन ज्ञानक्रान्तिः भवेत्। संस्कृते आधुनिकं ज्ञानं नास्ति इतीयमप्रथा परिहरणीया। एवंकरणेन आगामिसंवत्सरेषु भारतस्य सर्वेषु विश्वविद्यालयेषु History, Economics, Physics, Maths इत्यादिपथेषु भारतीययोगदानस्य सुपरिचयं कर्तुं कर्णाटकसंस्कृतविश्वविद्यालयः मूलप्रेरकस्स्यात्, येन भारतीयछात्राः स्वपूर्वजानां विषये स्वाभिमानिनः भवेयुः। स्वातन्त्र्यं च सुरक्षितं स्यात्।

इदानीं विविधदेवालयेषु सांस्कृतिकसंस्थासु वेदान्तगोष्ठ्यः प्रवर्तन्ते। तेषु आदौ संस्कृताध्ययनगोष्ठ्यः प्रचलेयुः। सार्वत्रिकशिक्षणविद्यालयेष्वपि संस्कृतसप्ताह आचरणीयः। शास्त्रगोष्ठ्यः साहित्यगोष्ठ्यश्च प्रवर्तयितुं कर्णाटकसंस्कृत–विश्वविद्यालयः अग्रेसरः भवेत्।

**सं** – भूयांसि नमांसि। आपृच्छे भवन्तम्।

**पा** – शिवास्ते पन्थानस्सन्तु। ❑

---

(२८ तम पृष्ठतः।)

विष्णुसहस्रनामस्तोत्रम्। अथ धर्मराजः धर्मं प्रतिनिधत्ते। भीमो भक्त्यादिदशकम् – भक्तिर्ज्ञानं वैराग्यं प्रज्ञा मेधा धृतिः स्थितिर्योगः प्राणो बलमिति। श्रवणं मननं ध्यानञ्च अर्जुनात् अध्येयम्। नकुलः शीलस्य, सहदेवः विनयस्य च द्योतकौ। एवं पञ्चापि पाण्डवाः १८ गुणानां द्योतकाः। तदिदं समग्रस्य महाभारतस्य मनश्शास्त्रीयं विवरणम्। तस्य सारसङ्ग्रहः अष्टादशाध्यायमयी भगवद्गीता। तेन भगवद्गीता तत्त्वशास्त्रमपि मनश्शास्त्रमपि। मनोव्याधिग्रस्तमर्जुनं मनोरोगचिकित्सावित् भगवान् कृष्णो हि स्वयमगदङ्कारो भूत्वा अर्जुनस्याधिमुपशमय्य तं युद्धे प्रवर्तयामास। अतः, प्रथमः मनश्शास्त्रविदिति गरिमा तस्य। तत्त्वशास्त्रमिति गीतामधीयते सम्प्रदायज्ञाः। यदि मनश्शास्त्रमिति मत्वा अधीयेरन् कश्चन अपूर्वः प्रपञ्चः तेषां पुरः प्रकटो भवति।

कर्णटकसंस्कृतविश्वविद्यालयस्य कुलपतिः प्रो. मल्लेपुरं जि. वेङ्कटेशवर्यः कार्यक्रमस्य आध्यक्ष्यम् ऊढ्वा उपन्यासमालायाः अस्याः महत्त्वं प्रत्यपादयत्। डा. श्रीनिवास वरखेडिवर्यः उपस्थितानां स्वागतं व्याहरत्। सन्दर्भेऽस्मिन् उपन्यासस्य ग्रन्थरूपमपि लोकाय अर्पितम्। ❑

## संस्कृतमुज्जीव्यताम्

कर्णाटकराज्यस्य राज्यपालः डा. हंसराज भारद्वाजः अत्र अब्रवीत् – "संस्कृतभाषा उज्जीवनीया। वेदानां वैज्ञानिकं संशोधनं कर्तव्यम्" इति।

"अत एव संस्कृतविश्वविद्यालयस्य आरम्भाय मया विशेषाज्ञा कृता। प्राज्ञः प्राध्यापकः प्रो. मल्लेपुरं जि. वेङ्कटेशः कुलपतिस्थाने नियुक्तः। एवं संस्कृतक्षेत्रे अभिवृद्धिः साध्यते" इति राज्यपालः अवदत्। समष्टिप्रतिष्ठानेन आयोजिते समारम्भे सः भाषते स्म।

**वार्ताकृपा – 'सुधर्मा'संस्कृतदिनपत्रिका**

**Book-Post**

ಇಂದ,

**ಕುಲಸಚಿವರು**

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

**ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ**

**ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ**

**ಬೆಂಗಳೂರು – 560 018.**

**ದೂರವಾಣಿ: 080 – 2670 1303**

ಇವರಿಗೆ,

______________________________

______________________________

______________________________

______________________________

**Vartha Patram:** *Quarterly news bulletin of Karnataka Samskrit University, Vol. 1, No. 4. Pub. by the* ***Registrar for Karnataka Samskrit University****, Sri Chamarajendra Samskrit College Campus, Pampamahakavi Road, Chamarajapete, Bangalore - 560 018, Phone: 080-2670 1303 & Printed at* ***Satyasri Printers Pvt. Ltd.****, # 16/1, 3rd Cross, 2nd Main, Kasturaba Nagar, Mysore Road, Bangalore - 560 026, Phone: 080-26748811.*